# ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಬಗ್ಗೆ ನೀವು ತಿಳಿದುಕೊಳ್ಳಬೇಕಾದ ಮಾಹಿತಿ

## ಎ. ಅರ್ಥ ವಿವರಣೆ

### 1. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ ಅಂದರೇನು?

**ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ: (ಎನ್‌ಬಿಎಫ್ಎಸ್:** ನಾನ್–ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನಿ) ಎಂದರೆ: **ಅ)** 1956ರ ಕಂಪನಿ ಕಾಯಿದೆಯಡಿ ನೋಂದಾಯಿತವಾದ ಸಂಸ್ಥೆ **ಆ)** ತಾತ್ತ್ವಿಕವಾಗಿ ಸಂಸ್ಥೆಯ ಮುಖ್ಯ ವಹಿವಾಟು ಷೇರು/ ದಾಸ್ತಾನು/ ಸಾಲ ಪತ್ರ/ ಋಣಸಂಚಯ ಪತ್ರ/ ಭದ್ರತೆ/ ಭೋಗ್ಯ/ ಪ್ರತಿಫಲ ಖರೀದಿ, ವಿಮಾ ವಹಿವಾಟು, ಚೀಟಿಗಳಲ್ಲಿ ಹಣ ಹೂಡಿಕೆಯಾಗಿರುತ್ತದೆ **ಇ)** ಅದರ ತಾತ್ತ್ವಿಕ ವಹಿವಾಟು ಯಾವುದಾದರೂ ಠೇವಣಿ ಅಥವ ಸ್ಕೀಂ ಮೂಲಕ ಏಕಕಾಲಕ್ಕೆ ಇಲ್ಲವೇ ಕಂತುಗಳಲ್ಲಿ ಠೇವಣಿಗಳನ್ನು ಸ್ವೀಕರಿಸುವುದಾಗಿರುತ್ತದೆ **ಈ)** ಅದೇನೇ ಇದ್ದರೂ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯ ತಾತ್ತ್ವಿಕ ವಹಿವಾಟು (1934ರ ಆರ್‌ಬಿಐ ಕಾಯ್ದೆಯ ನಿಯಮ 45 ಐ (ಸಿ) ಪ್ರಕಾರ) ಕೃಷಿ ಚಟುವಟಿಕೆ, ಕೈಗಾರಿಕಾ ಚಟುವಟಿಕೆ, ಸ್ಥಿರಾಸ್ತಿಗಳ ನಿರ್ಮಾಣ, ವ್ಯಾಪಾರ ಅಥವ ಮಾರಾಟ/ ಖರೀದಿಗಳನ್ನು ಒಳಗೊಂಡಿರುವುದಿಲ್ಲ. ಮಾತ್ರವಲ್ಲ, 45 ಐ (ಸಿ) ಯಲ್ಲಿ ಸೂಚಿಸಿರುವಂತೆ ಸಂಸ್ಥೆಯ ಸಾಲ/ಮುಂಗಡಗಳ ಹಣಕಾಸು ವಹಿವಾಟು ಸಂಸ್ಥೆಗಾಗಿಯೇ ಬಳಸುವುದರ ಹೊರತಾದ ಚಟುವಟಿಕೆಯಾಗಿರಬೇಕಿದೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ಈ ಸೌಲಭ್ಯದ ಗೈರು ಹಾಜರಿಯಲ್ಲಿ ಎಲ್ಲ ಸಂಸ್ಥೆಗಳೂ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳೇ ಆಗಿರುತ್ತವೆ.

### 2. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗೆ ವ್ಯವಸ್ಥಿತವಾಗಿ ಇರಬೇಕಾದುದೇನು?

ನೂರು ಕೋಟಿ ರೂ.ಗಳು ಅಥವ ಅದಕ್ಕಿಂತ ಹೆಚ್ಚಿನ ಸ್ವತ್ತುಗಳಿರುವ ಹಣಕಾಸು ಸಂಸ್ಥೆಗಳು ಪರಿಶೋಧನೆಗೆ ಒಳಗಾದ, ತೀರ ಇತ್ತೀಚಿನ ಬಾಕಿ ಲೆಕ್ಕದ ಪತ್ರವನ್ನು ಹೊಂದಿರುವುದು ಎನ್‌ಬಿಎಫ್‌ಸಿಗಳಿಗೆ ಕ್ರಮಬದ್ಧತೆ ದೃಷ್ಟಿಯಿಂದ ಮುಖ್ಯವಾದುದಾಗಿದೆ. ಈ ಬಗೆಯ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ದೇಶದ ಆರ್ಥಿಕತೆಗೆ ಭದ್ರತೆ ಒದಗಿಸಬಲ್ಲವು ಎಂಬ ಅಂಶ ಈ ರೀತಿಯ ವಿಂಗಡಣೆಯ ಹಿಂದಿನ ತಾರ್ಕಿಕತೆಯಾಗಿದೆ.

## ಬಿ. ಆರ್‌ಬಿಐನ ಸಾರ್ವತ್ರಿಕ ನಿಯಂತ್ರಣ

### 3. ಆರ್‌ಬಿಐ ಎಲ್ಲ ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುತ್ತದೆಯೇ?

ಇಲ್ಲ. ಕೆಲ ಬಗೆಯ ಹಣಕಾಸು ವ್ಯವಹಾರಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಗಾಗಿ ಕಾಯಿದೆಯಂತೆ ಕೆಲವು **ನಿಯಂತ್ರಣ ಪ್ರಾಧಿಕಾರ**ಗಳನ್ನು ರಚಿಸಲಾಗಿದೆ. ಉದಾಹರಣೆಗೆ, ವಿಮಾ ಸಂಸ್ಥೆಗಳಿಗಾಗಿ ಐಆರ್‌ಡಿಎ, ವ್ಯಾಪಾರಿ ಬ್ಯಾಂಕಿಂಗ್ ಸಂಸ್ಥೆಗಳು, ವೆಂಚರ್ ಬಂಡವಾಳ ಸಂಸ್ಥೆಗಳು, ದಾಸ್ತಾನು ದಳ್ಳಾಳಿ ಸಂಸ್ಥೆಗಳು ಮತ್ತು ಮ್ಯೂಚುಅಲ್ ಫಂಡ್‌ಗಳನ್ನು ನಿಯಂತ್ರಿಸಲು ಸೆಕ್ಯೂರಿಟೀಸ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯ (ಸೆಬಿ), ಗೃಹ ಹಣಕಾಸು

ಸಂಸ್ಥೆಗಳ ನಿಯಂತ್ರಣಕ್ಕೆ ನ್ಯಾಶನಲ್ ಹೌಸಿಂಗ್ ಬ್ಯಾಂಕ್, ನಿಧಿ ಸಂಸ್ಥೆಗಳನ್ನು, ರಾಜ್ಯ ಸರ್ಕಾರಗಳನ್ನು ಮತ್ತು ಚಿಟ್ ಫಂಡ್ ಸಂಸ್ಥೆಗಳನ್ನು ನಿಯಂತ್ರಿಸಲು ಡಿಪಾರ್ಟ್‌ಮೆಂಟ್ ಆಫ್ ಕಂಪನೀಸ್ ಅಫೇರ್ಸ್ (ಡಿಸಿಎ). ಹಣಕಾಸು ವ್ಯವಹಾರವನ್ನು ನಡೆಸುವ ಆದರೆ ಇತರೆ ಪ್ರಾಧಿಕಾರಗಳ ನಿಯಂತ್ರಣಕ್ಕೆ ಒಳಪಟ್ಟ ಹಣಕಾಸು ಸಂಸ್ಥೆಗಳಿಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಕೆಲವು ನಿರ್ದಿಷ್ಟ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ವಿನಾಯಿತಿಯನ್ನು ನೀಡಿದೆ. ಉದಾಹರಣೆಗೆ, ನೋಂದಾವಣಿ, ದ್ರವ್ಯರೂಪಿ ಸ್ವತ್ತುಗಳ ನಿರ್ವಹಣೆ, ಕಾನೂನು ಸಮ್ಮತ ಕಾಯ್ದಿಟ್ಟ ನಿಧಿ ಇತ್ಯಾದಿ. ಕೆಳಗಿನ ಕೋಷ್ಟಕವು ಸಂಬಂಧಿಸಿದ ನಿಯಂತ್ರಕಗಳ ಚಟುವಟಿಕೆಯ ಲಕ್ಷಣಗಳನ್ನು ತೆರೆದಿಡುತ್ತದೆ.

### 4. ಯಾವ ಬಗೆಯ ನಿರ್ದಿಷ್ಟ ಹಣಕಾಸು ಸಂಸ್ಥೆಗಳು ಆರ್‌ಬಿಐ ನಿಯಂತ್ರಣಕ್ಕೆ ಒಳಪಟ್ಟಿವೆ?

(1) ಸಾಲ ನೀಡಿಕೆ (2) ಷೇರು, ಬಾಂಡ್, ಸ್ಟಾಕ್ ಇತ್ಯಾದಿಗಳನ್ನು ಸಂಗ್ರಹಿಸುವ ಅಥವ ಹಣಕಾಸು ಒದಗಿಸುವ ಅಥವ ಸಾಲ ಖರೀದಿಗಳ ವ್ಯವಹಾರವನ್ನು ನಡೆಸುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ನಿಯಂತ್ರಿಸುತ್ತದೆ. ಜತೆಗೆ, ಠೇವಣಿಗಳನ್ನು ಸ್ವೀಕರಿಸುವ ವಹಿವಾಟನ್ನು ಮೂಲ ವ್ಯವಹಾರವಾಗಿ ಹೊಂದಿರುವ ಸಂಸ್ಥೆಗಳನ್ನು ಕೂಡ (ಆರ್‌ಬಿಐ ಕಾಯಿದೆ 1934ರ 45 ಐ (ಸಿ)ಯ ಅಧಿನಿಯಮದಂತೆ) ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ನಿಯಂತ್ರಿಸುತ್ತದೆ.

### 5. 50:50 ತಾತ್ವಿಕ ವ್ಯವಹಾರ ಮಾನದಂಡವನ್ನು ಅನುಸರಿಸುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಮೇಲೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಯಾವ ರೀತಿಯ ಅಧಿಕಾರವನ್ನು ಹೊಂದಿದೆ?

ಆರ್‌ಬಿಐ 1934ರ ಕಾಯಿದೆ ನೀಡಿರುವ ಅಧಿಕಾರದ ಪ್ರಕಾರ ಆರ್‌ಬಿಐ, 50–50 ತಾತ್ವಿಕ ವ್ಯವಹಾರ ಮಾನದಂಡವನ್ನು ಅನುಸರಿಸುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ನೋಂದಾವಣಿ, ನೀತಿ ನಿರೂಪಣೆ, ನಿರ್ದೇಶನ ನೀಡುವುದು, ಪರಿಶೋಧಿಸುವುದು, ಮೇಲ್ವಿಚಾರಣೆ–ಕಣ್ಗಾವಲು ನಡೆಸುವುದು ಇಂಥವೇ ಅಧಿಕಾರವನ್ನು ಹೊಂದಿದೆ. ಆರ್‌ಬಿಐ ನಿಯಮಗಳನ್ನು, ನಿರ್ದೇಶನಗಳನ್ನು ಉಲ್ಲಂಘಿಸುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳನ್ನು ಆರ್‌ಬಿಐ ತನ್ನ ಕಾಯಿದೆಯಡಿ ದಂಡಿಸಬಹುದಾಗಿದೆ. ಇಂಥ ಸಂಸ್ಥೆಗಳಿಗೆ ನೀಡಿದ ಮಾನ್ಯತೆಯನ್ನು ರದ್ದುಪಡಿಸುವುದು ಅಥವ ಠೇವಣಿಗಳನ್ನು ಸ್ವೀಕರಿಸದಂತೆ ನಿರ್ಬಂಧ ಹೇರುವುದು ಮತ್ತು ಸ್ವತ್ತುಗಳನ್ನು ಬೇರ್ಪಡಿಸುವುದು ಅಥವ ಅಂಥ ಸಂಸ್ಥೆಗಳ ಪರಿಸಮಾಪ್ತಿಗೆ ಸೂಚಿಸುವುದು ಆರ್‌ಬಿಐ ವಿಧಿಸಬಹುದಾದ ದಂಡನೆಗಳಾಗಿವೆ.

## ಸಿ. ಆರ್‌ಬಿಐ ನಿಯಂತ್ರಣಕ್ಕೆ ಒಳಪಡದ ಸಂಸ್ಥೆಗಳು

### 6. ವಿಮಾ ಸಂಸ್ಥೆಗಳು, ಸ್ಟಾಕ್ ದಳ್ಳಾಳಿ ಮತ್ತು ವ್ಯಾಪಾರಿ ಬ್ಯಾಂಕಿಂಗ್ ಸಂಸ್ಥೆಗಳು, ನಿಧಿಗಳು, ಗೃಹ ಸಾಲ ಸಂಸ್ಥೆಗಳು, ಮತ್ತು ಚಿಟ್ ಫಂಡ್ ಸಂಸ್ಥೆಗಳು ಏಕೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ನಿಯಂತ್ರಣಕ್ಕೆ ಒಳಪಟ್ಟಿಲ್ಲ?

ಈ ಸಂಸ್ಥೆಗಳು ಈಗಾಗಲೇ ಹಣಕಾಸು ಕ್ಷೇತ್ರದ ಇತರೆ ನಿಯಂತ್ರಣ ಪ್ರಾಧಿಕಾರಗಳ ತೆಕ್ಕೆಗೆ ಒಳಪಟ್ಟಿರುವುದರಿಂದ, ದ್ವಿನಿಯಂತ್ರಣವನ್ನುತಪ್ಪಿಸುವ ಉದ್ದೇಶದಿಂದ ಆರ್‌ಬಿಐ ಈ ನಿಲುವನ್ನು ತೆಗೆದುಕೊಂಡಿದೆ.

**7. ತನ್ನ ಕಕ್ಷೆಯಿಂದ ಹೊರತಾಗಿರುವ ಈ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಮೇಲೆ ಆರ್‌ಬಿಐ ಯಾವುದೇ ಬಗೆಯ ಕಾನೂನಾತ್ಮಕ ಅಧಿಕಾರವನ್ನು ಹೊಂದಿದೆಯೇ?**

ಸಂಸ್ಥೆಗೆ ಯಾವ ರೀತಿಯ ವಿನಾಯಿತಿಯನ್ನು ನೀಡಲಾಗಿದೆ ಎಂಬುದರ ಮೇಲೆ ಈ ಅಂಶ ನಿಂತಿದೆ. ಉದಾಹರಣೆಗೆ, ಗೃಹ ಹಣಕಾಸು ಸಂಸ್ಥೆಗಳು ಆರ್‌ಬಿಐ ನಿಯಂತ್ರಣದಿಂದ ಹೊರತಾಗಿವೆ. ಅಂತೆಯೇ, ಉಳಿದ ಸಂಸ್ಥೆಗಳಾದ ಚಿಟ್ ಫಂಡ್, ನಿಧಿ ಸಂಸ್ಥೆಗಳು, ಪರಸ್ಪರ ಲಾಭ ಪಡೆವ ಸಂಸ್ಥೆಗಳು, ವಿಮಾ ಸಂಸ್ಥೆಗಳು, ವ್ಯಾಪಾರಿ ಬ್ಯಾಂಕಿಂಗ್ ಸಂಸ್ಥೆಗಳು, ಸ್ಟಾಕ್ ದಳ್ಳಾಳಿ ಸಂಸ್ಥೆ ಇತ್ಯಾದಿಗಳು ರಿವರ್ಸ್ ಬ್ಯಾಂಕ್ ನೋಂದಣಿ, ದ್ರವ್ಯರೂಪಿ ಸ್ವತ್ತುಗಳ ನಿರ್ವಹಣೆ ಮತ್ತು ಕಾನೂನು ಸಮ್ಮತ ಕಾಪುನಿಧಿಗಳ ನಿಯಂತ್ರಣದಿಂದ ಮುಕ್ತವಾಗಿವೆ. ಆದ್ದರಿಂದಲೇ, ಉಳಿದ ನಿಯಂತ್ರಣ ಪ್ರಾಧಿಕಾರಗಳ ಹಿತಾಸಕ್ತಿಗೆ ಮಾರಕವಾಗುವಂತೆ ಆರ್‌ಬಿಐ ನಿರ್ದೇಶನಗಳನ್ನು ನೀಡುವುದಿಲ್ಲ. ಉಳಿದ ನಿಯಂತ್ರಕ ಪ್ರಾಧಿಕಾರಗಳೆಂದರೆ, ವಿಮಾ ಸಂಸ್ಥೆಗಳ ನಿಯಂತ್ರಣಕ್ಕೆ ಐಆರ್‌ಡಿಎ, ಗೃಹ ಹಣಕಾಸು ಸಂಸ್ಥೆಗಳ ನಿಯಂತ್ರಣಕ್ಕೆ ನ್ಯಾಶನಲ್ ಹೌಸಿಂಗ್ ಬ್ಯಾಂಕ್, ಸ್ಟಾಕ್ ದಳ್ಳಾಳಿ, ವ್ಯಾಪಾರಿ ಬ್ಯಾಂಕಿಂಗ್ ಸಂಸ್ಥೆಗಳ, ವೆಂಚರ್ ಬಂಡವಾಳ ಸಂಸ್ಥೆಗಳ, ಮತ್ತು ಸಾಮೂಹಿಕ ಹೂಡಿಕೆ ಸ್ಕೀಮ್‌ಗಳನ್ನು ನಡೆಸುವ, ಮ್ಯೂಚುಅಲ್ ಫಂಡ್ ನೀಡಿಕೆ ಮಾಡುವ ಸಂಸ್ಥೆಗಳನ್ನು ಸೆಬಿ ನಿಯಂತ್ರಿಸುತ್ತದೆ. ನಿಧಿ ಸಂಸ್ಥೆಗಳನ್ನು ಕೇಂದ್ರ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಚಿಟ್ ಫಂಡ್‌ಗಳನ್ನು ಆಯಾಯ ರಾಜ್ಯ ಸರ್ಕಾರಗಳು ನಿಯಂತ್ರಿಸುತ್ತವೆ.

**8. ತಮ್ಮ ವ್ಯವಹಾರದ ಭಾಗವಾಗಿ ಹಣಕಾಸು ವಹಿವಾಟು ನಡೆಸುವ ಸಂಸ್ಥೆಗಳನ್ನು ಆರ್‌ಬಿಐ ನಿಯಂತ್ರಿಸುತ್ತದೆಯೆ?**

ಹಣಕಾಸು ವಹಿವಾಟನ್ನು ತಾತ್ತ್ವಿಕವಾಗಿ ತಮ್ಮ ಆದ್ಯತೆಯ ವಹಿವಾಟನ್ನಾಗಿ ಸ್ವೀಕರಿಸಿರುವ ಸಂಸ್ಥೆಗಳನ್ನು ರಿಸರ್ವ್ ಬ್ಯಾಂಕ್ ನಿಯಂತ್ರಿಸುತ್ತದೆ. ಆದ್ದರಿಂದಲೇ, ಕೃಷಿ ಚಟುವಟಿಕೆಯಲ್ಲಿ, ಕೈಗಾರಿಕೆ ಚಟುವಟಿಕೆಯಲ್ಲಿ, ವಸ್ತುಗಳ ಮಾರಾಟ–ಖರೀದಿಯಲ್ಲಿ, ಸ್ಥಿರಾಸ್ತಿ ನಿರ್ಮಾಣ, ಖರೀದಿ, ಅಥವ ಖರೀದಿ ಸೇವೆಗಳನ್ನು ತಮ್ಮ ಆದ್ಯತೆಯ ವಹಿವಾಟಾಗಿ ಸ್ವೀಕರಿಸಿರುವ ಸಂಸ್ಥೆಗಳನ್ನು ಮತ್ತು ಸಣ್ಣಪುಟ್ಟ ಹಣಕಾಸು ವಹಿವಾಟು ನಡೆಸುವ ಸಂಸ್ಥೆಗಳನ್ನು ಆರ್‌ಬಿಐ ತಮ್ಮ ನಿಯಂತ್ರಣ ಕಕ್ಷೆಯಿಂದ ಹೊರಗಿಟ್ಟಿದೆ.

**9. 50–50 ಮಾನದಂಡವನ್ನು ಪೂರ್ಣಗೊಳಿಸದ ಆದರೆ, ಠೇವಣಿಗಳನ್ನು ಸ್ವೀಕರಿಸುವ ಸಂಸ್ಥೆಗಳು ಆರ್‌ಬಿಐ ನಿಯಮದಡಿ ಬರುತ್ತವೆಯೇ?**

ತನ್ನ ಒಟ್ಟಾರೆ ಸ್ವತ್ತುಗಳಲ್ಲಿ ಶೇಕಡ 50ಕ್ಕೂ ಹೆಚ್ಚಿನ ಹಣಕಾಸು ಸ್ವತ್ತನ್ನು ಹೊಂದಿಲ್ಲದ ಮತ್ತು ತನ್ನ ಆದಾಯದಲ್ಲಿ ಕನಿಷ್ಠ ಶೇಕಡ 50 ಆದಾಯವನ್ನು ಅಂಥ ಸ್ವತ್ತುಗಳ ಮೂಲಕ ಪಡೆಯದ ಸಂಸ್ಥೆಗಳನ್ನು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ ಎಂದು ಪರಿಗಣಿಸಲಾಗುವುದಿಲ್ಲ. ಇಂಥ ಸಂಸ್ಥೆಗಳ ತಾತ್ವಿಕ ಆದ್ಯತಾ ವಲಯವು ಹಣಕಾಸೇತರ ಕೃಷಿ ಚಟುವಟಿಕೆ, ಕೈಗಾರಿಕಾ ಚಟುವಟಿಕೆ, ಸ್ಥಿರಾಸ್ತಿಗಳ ನಿರ್ಮಾಣ/ಖರೀದಿ–ಮಾರಾಟ, ಖರೀದಿ ಸೇವೆಗಳನ್ನು

ಒದಗಿಸುವುದಾಗಿರುತ್ತದೆ. ಅಂತೆಯೇ, ಇವು ಬ್ಯಾಂಕಿಂಗೇತರ, ಹಣಕಾಸೇತರ ಸಂಸ್ಥೆಗಳಾಗಿರುತ್ತವೆ. ಈ ಬಗೆಯ ಬ್ಯಾಂಕಿಂಗೇತರ, ಹಣಕಾಸೇತರ ಸಂಸ್ಥೆಗಳ ಠೇವಣಿ ಸ್ವೀಕೃತಿಯು ಕಂಪನೀಸ್ ಅಕ್ಸೆಪ್ಟನ್ಸ್ ಆಫ್ ಡಿಪಾಸಿಟ್ ರೂಲ್ಸ್ 1975ರ ನಿಯಂತ್ರಣಕ್ಕೆ ಒಳಪಟ್ಟಿವೆ. ರಾಜ್ಯ ಸರ್ಕಾರಗಳ ಕಂಪನಿಗಳ ರಿಜಿಸ್ಟ್ರಾರ್ ಇಂಥ ಸ್ಕೀಮ್‌ಗಳನ್ನು ನಿಯಂತ್ರಿಸುತ್ತಾರೆ.

## ಡಿ. ತಾತ್ತ್ವಿಕ ಆದ್ಯತೆಯ ವಹಿವಾಟು ಮಾನದಂಡ (ಪಿಬಿಸಿ: ಪ್ರಿನ್ಸಿಪಲ್ ಬ್ಯುಸಿನೆಸ್ ಕ್ರೈಟಿರಿಯ)

### 10.ಹಣಕಾಸುವ್ಯವಹಾರನಡೆಸುವಲ್ಲಿ"ತಾತ್ತ್ವಿಕ ಆದ್ಯತೆಯವಹಿವಾಟು" ಎಂಬುದರ ಅರ್ಥವೇನು?

ಹಣಕಾಸು ವಹಿವಾಟು ನಡೆಸುವ ಸಂಸ್ಥೆಯ ಒಟ್ಟಾರೆ ಹಣಕಾಸು ಸ್ವತ್ತು ಶೇಕಡ 50ಕ್ಕಿಂತ ಹೆಚ್ಚಿನ ಭಾಗವಿದ್ದಲ್ಲಿ ಮತ್ತು ಸಂಸ್ಥೆಯ ಮೂಲ ಆದಾಯವು ಹಣಕಾಸು ಸ್ವತ್ತುಗಳ ಮೂಲಕ ಶೇಕಡ 50ಕ್ಕಿಂತ ಅಧಿಕ ಉತ್ಪಾದನೆಯಾಗುತ್ತಿದ್ದಲ್ಲಿ ಅದನ್ನು **ತಾತ್ತ್ವಿಕ ಆದ್ಯತೆಯ ವಹಿವಾಟು** ಎಂದು ಗುರುತಿಸಲಾಗುತ್ತದೆ. ಈ ಎರಡೂ ಮಾನದಂಡಗಳನ್ನು ಪೂರ್ಣಗೊಳಿಸುವ ಸಂಸ್ಥೆಯನ್ನು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯೆಂದು ಗುರುತಿಸಿ ಆರ್‌ಬಿಐ ನೋಂದಾಯಿಸಿಕೊಳ್ಳುತ್ತದೆ. ‘ತಾತ್ತ್ವಿಕ ಆದ್ಯತೆಯ ವಹಿವಾಟು’ ಎಂಬ ನುಡಿಗಟ್ಟನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಕಾಯಿದೆ ಟಂಕಿಸಿಲ್ಲ. ಹಣಕಾಸು ವಹಿವಾಟನ್ನು ಮುಖ್ಯವಾಗಿ ನಡೆಸುವ ಸಂಸ್ಥೆಗಳು ಆರ್‌ಬಿಐನೊಂದಿಗೆ ನೋಂದಾಯಿಸಿಕೊಳ್ಳಲಿ, ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಡಲಿ, ಎಂಬ ಕಾರಣದಿಂದ ರಿಸರ್ವ್ ಬ್ಯಾಂಕ್ ಈ ಪದವನ್ನು ಬಳಸುತ್ತಿದೆ. ಜತೆಗೆ, ಉಳಿದ ವ್ಯವಹಾರ, ಉತ್ಪಾದನಾ ಅಥವ ಕೈಗಾರಿಕಾ ಸಂಸ್ಥೆಗಳು ಈ ನಿಯಂತ್ರಣದ ವ್ಯಾಪ್ತಿಗೆ ಬರುವುದಿಲ್ಲ. ಗಮನಿಸಬೇಕಾದ ಅಂಶವೆಂದರೆ ಇದನ್ನು 50–50 ಪರೀಕ್ಷೆ ಎಂದು ಗುರುತಿಸಲಾಗುತ್ತಿದ್ದು ಸಂಸ್ಥೆಯು ಹಣಕಾಸು ವಹಿವಾಟು ನಡೆಸುವ ಸಂಸ್ಥೆಯೋ ಅಲ್ಲವೋ ಎಂಬುದನ್ನು ಗುರುತಿಸುತ್ತದೆ.

## ಇ. ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಗಳು (ಆರ್‌ಎನ್‌ಬಿಸಿ: ರೆಸ್ಯುಡರಿ ನಾನ್–ಬ್ಯಾಂಕಿಂಗ್ ಕಂಪನೀಸ್)

### 11. ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಗಳು (ಆರ್‌ಎನ್‌ಬಿಸಿ: ರೆಸ್ಯುಡರಿ ನಾನ್–ಬ್ಯಾಂಕಿಂಗ್ ಕಂಪನೀಸ್) ಎಂದರೇನು? ಮತ್ತು ಇವು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗಿಂತ ಹೇಗೆ ಭಿನ್ನವಾಗಿವೆ.

ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಯು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಭಾಗವಾಗಿದ್ದು, ಯಾವುದೇ ಸ್ಕೀಂ, ಅಥವ ಉಳಿದ ಬಗೆಯ ಏರ್ಪಾಟಿನಿಂದ ಠೇವಣಿಗಳನ್ನು ಸ್ವೀಕರಿಸುವುದನ್ನು ಮುಖ್ಯ ‘ತಾತ್ತ್ವಿಕ ಆದ್ಯತೆಯ ವಹಿವಾಟಾ’ಗಿ ಹೊಂದಿರುವ ಸಂಸ್ಥೆಯಾಗಿದೆ. ಈ ಸಂಸ್ಥೆಗಳು ಹೂಡಿಕೆ, ಸ್ವತ್ತು ಹಣಕಾಸು ಅಥವ ಸಾಲ ನೀಡಿಕೆಯ ವಹಿವಾಟು ನಡೆಸುವುದಿಲ್ಲ. ಠೇವಣಿ ಸಂಗ್ರಹ ಮತ್ತು ಠೇವಣಿದಾರರ ನಿಧಿ ನಿರ್ವಹಣೆಯು ವಿಧಾನಗಳು

ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ವಿಧಾನಗಳಿಗಿಂತ ಬೇರೆಯಾಗಿವೆ. ಅದೇನೇ ಇದ್ದರೂ, ಯಾವುದೇ ರೀತಿಯ ಠೇವಣಿ ಸಂಗ್ರಹ ಮಾಡದಂತೆ, ವಹಿವಾಟನ್ನು ಪರಿಸಮಾಪ್ತಿಗೊಳಿಸುವಂತೆ ಈ ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಗಳಿಗೆ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದೆ.

## 12. ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಗಳು ಠೇವಣಿ ಸಂಗ್ರಹಿಸುವಲ್ಲಿ ಯಾವುದೇ ಬಗೆಯ ಮಿತಿ ಇಲ್ಲವೆಂದು ಕೇಳಲಾಗಿದೆ, ಹಾಗಿದ್ದರೆ ಅವರ ಬಳಿ ಇಟ್ಟ ಠೇವಣಿ ಎಷ್ಟು ಸುರಕ್ಷಿತ?

ಶೇಷಾತ್ಮಕ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಠೇವಣಿ ಸಂಗ್ರಹಿಸುವಲ್ಲಿ ಯಾವುದೇ ಮಿತಿಯಿಲ್ಲ ಎಂಬುದು ನಿಜ. ಆದಾಗ್ಯೂ, ತನ್ನಲ್ಲಿರುವ ಸಂಗ್ರಹಿತವಾದ ಠೇವಣಿಯ ಅಷ್ಟೂ ಮೊತ್ತವನ್ನು ಅಂಗೀಕೃತಗೊಂಡ ಹೂಡಿಕೆಯಲ್ಲಿ ತೊಡಗಿಸುವುದನ್ನು ಈ ಸಂಸ್ಥೆಗಳು ಖಾತರಿಪಡಿಸಬೇಕು. ಅದನ್ನೇ ವಿವರಿಸಿ ಹೇಳುವುದಾದರೆ, ಠೇವಣಿದಾರರ ಹಿತ ಕಾಪಾಡಲು ಶೇಕಡ ನೂರರಷ್ಟು ಠೇವಣಿಯನ್ನು ಕೇಂದ್ರ/ರಾಜ್ಯಗಳ ಭದ್ರತೆ, ಸ್ಕೆಡ್ಯೂಲ್ ಬ್ಯಾಂಕ್‌ಗಳಲ್ಲಿ ಸಾವಧಿ ಠೇವಣಿ ಮತ್ತು ಅಂಥ ಬ್ಯಾಂಕುಗಳು ನೀಡುವ ಸರ್ಟಿಫಿಕೇಟ್ ಡಿಪಾಸಿಟ್, ಮ್ಯೂಚುಅಲ್ ಫಂಡ್‌ಗಳಲ್ಲಿ ತೊಡಗಿಸಬೇಕು.

## 13. ಠೇವಣಿಯ ಕಂತುಗಳನ್ನು ನಿಯಮಿತವಾಗಿ ತುಂಬದಿರುವಾಗ ಅಥವ ನಿಲ್ಲಿಸಿರುವ ಪಕ್ಷದಲ್ಲಿ ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಯು ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೆ?

ಇಲ್ಲ. ಠೇವಣಿದಾರರ ಯಾವುದೇ ಬಗೆಯ ಠೇವಣಿ ಅಥವ ಯಾವುದೇ ಬಗೆಯ ಬಡ್ಡಿ, ಪ್ರಿಮಿಯಂ ಕಂತು, ಬೋನಸ್ ಅಥವ ಯಾವುದೇ ಬಗೆಯ ಸೌಲಭ್ಯಗಳನ್ನು ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಯು ಮುಟ್ಟುಗೋಲು ಹಾಕಿಕೊಳ್ಳುವಂತಿಲ್ಲ.

## 14. ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಗಳು ತಾವು ಸಂಗ್ರಹಿಸುವ ಠೇವಣಿಗಳಿಗೆ ನೀಡುವ ಬಡ್ಡಿ ದರವೇನು ಮತ್ತು ಅವು ಸಂಗ್ರಹಿಸಿದ ಠೇವಣಿಗಳ ತೀರುವಳಿ ಸಮಯವೇನು?

ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆಗಳು ತಾವು ಠೇವಣಿದಾರರಿಂದ ಏಕಕಾಲದ ಮೊತ್ತ ಅಥವ ಮಾಸಿಕ ಇಲ್ಲವೆ ದೀರ್ಘಕಾಲದ ವಿರಾಮದ ನಂತರ ಸಂಗ್ರಹಿಸುವ, ದೈನಿಕ ಠೇವಣಿ ನಿಯಮದಡಿ ಸಂಗ್ರಹಿಸುವ ಠೇವಣಿಯ ಮೇಲೆ ಶೇಕಡ 5ರಷ್ಟು, (ವಾರ್ಷಿಕವಾಗಿ  ಸಂಚಯಿತಗೊಳಿಸಬೇಕು) ಬಡ್ಡಿಯನ್ನು ನೀಡಬೇಕು. ಇಲ್ಲಿ ನೀಡುವ ಬಡ್ಡಿಯು ಶೇಷಾತ್ಮಕ ಬ್ಯಾಂಕಿಂಗೇತರ ಸಂಸ್ಥೆ ತಾನು ಠೇವಣಿ ಮರಳಿಸುವಾಗ ಆಶ್ವಾಸನೆ ನೀಡಿರುವ ಬೋನಸ್ ಮತ್ತಿತರ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಇಂಥ ಸಂಸ್ಥೆಗಳು ತಾನು ಠೇವಣಿ ಸ್ವೀಕರಿಸಿದ ದಿನದಿಂದ ಕನಿಷ್ಠ 12 ತಿಂಗಳು ಮತ್ತು ಗರಿಷ್ಠ 84 ತಿಂಗಳು ಕಾಲಾವಧಿಯನ್ನು ಹೊಂದಿರುವ ಠೇವಣಿಗಳನ್ನು ಸ್ವೀಕರಿಸಬಹುದು. ಬೇಡಿಕೆಯಾಧಾರಿತ ಮರುಪಾವತಿ ಠೇವಣಿಗಳನ್ನು ಇಂಥ ಸಂಸ್ಥೆಗಳು ಸ್ವೀಕರಿಸುವಂತಿಲ್ಲ. ಅದೇನೇ ಇದ್ದರೂ, ಇದೀಗ

ಚಲಾವಣೆಯಲ್ಲಿರುವ ಇಂಥ ಎರಡು ಸಂಸ್ಥೆಗಳಿಗೆ (ಪಿಯರ್‌ಲೆಸ್ ಮತ್ತು ಸಹರಾ ಫೈನಾನ್ಷಿಯಲ್ ಕಾರ್ಪೋರೇಶನ್ ಲಿಮಿಟೆಡ್) ರಿಸರ್ವ್ ಬ್ಯಾಂಕ್ ಠೇವಣಿ ಸಂಗ್ರಹವನ್ನು ನಿಲ್ಲಿಸುವಂತೆ ನಿರ್ದೇಶನ ನೀಡಿದ್ದು, ಠೇವಣಿದಾರರಿಗೆ ಹಣವನ್ನು ಮರಳಿಸುವಂತೆ ಸೂಚಿಸಿದೆ. ಈ ವಹಿವಾಟು ವಿಧಾನವು ಕಾರ್ಯಸಾಧುವಾಗಿಲ್ಲದಿರುವುದೇ ಅದಕ್ಕೆ ಕಾರಣವಾಗಿದೆ.

## ಎಫ್. ಅರ್ಹ/ಅನರ್ಹ ಸಂಸ್ಥೆಗಳು ಠೇವಣಿ ಸ್ವೀಕಾರ ಮತ್ತಿತರ ಸಂಬಂಧಿತ ವಿಷಯಗಳ ಹಿನ್ನೆಲೆಯಲ್ಲಿ ಠೇವಣಿಯ ಅರ್ಥ ವಿವರಣೆ

### 15. ಠೇವಣಿಗಳು ಎಂದರೇನು?

ಠೇವಣಿಗಳು ಎಂದರೆ, ಯಾವುದೇ ರೂಪದಲ್ಲಿ ಸಂಗ್ರಹಿಸಿದ ಧನವಾಗಿದೆ. ಷೇರು ಬಂಡವಾಳ, ಭಾಗಿತ್ವದ ಸಂಸ್ಥೆಯಲ್ಲಿ ಹೂಡಿದ ಬಂಡವಾಳ, ಭದ್ರತಾ ಹೂಡಿಕೆ, ಮುಂಗಡ ಹೂಡಿಕೆ, ದಾಸ್ತಾನು ಖರೀದಿ ಅಥವ ನಿರ್ಮಾಣಕ್ಕೆ ನೀಡಿದ ಮುಂಗಡ, ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ, ಲೇವಾದೇವಿ ಮಾಡುವವರಿಂದ ಪಡೆದ ಸಾಲ ಮತ್ತು ಚೀಟಿ ವ್ಯವಹಾರದ ಚಂದಾಹಣವು ಈ ಅರ್ಥ ವಿವರಣೆಯಲ್ಲಿ ಸೇರಿರುವುದಿಲ್ಲ. ಮೇಲೆ ಸೂಚಿಸಿದ ವಿಧಾನದಲ್ಲಿ ಅಲ್ಲದೆ, ಬೇರಾವುದೇ ರೀತಿಯಲ್ಲಿ ಸಂಗ್ರಹಿಸಿದ ಹಣವನ್ನು ಠೇವಣಿ ಎಂದು ವಿವರಿಸಬಹುದಾಗಿದೆ.

### 16. ಯಾವ ಸಂಸ್ಥೆಗಳು ಕಾನೂನು ಸಮ್ಮತವಾಗಿ ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸಬಹುದು?

ಸಹಕಾರಿ ಬ್ಯಾಂಕುಗಳನ್ನು ಒಳಗೊಂಡು ಎಲ್ಲ ಬ್ಯಾಂಕುಗಳು ಠೇವಣಿಗಳನ್ನು ಸ್ವೀಕರಿಸಬಹುದು. ಆರ್‌ಬಿಐನಿಂದ ಠೇವಣಿ ಸ್ವೀಕೃತಿ ನೋಂದಣಿ ಪತ್ರವನ್ನು ಹೊಂದಿರುವ ಬ್ಯಾಂಕಿಂಗೇತರ ಸಂಸ್ಥೆಗಳು ಕೂಡ ಸಾರ್ವಜನಿಕ ಠೇವಣಿಗಳನ್ನು ಸ್ವೀಕರಿಸಬಹುದು. ವಿವರಿಸಿ ಹೇಳುವುದಾದರೆ, ರಿಸರ್ವ್ ಬ್ಯಾಂಕಿನೊಂದಿಗೆ ನೋಂದಾಯಿತವಾದ ಎಲ್ಲ ಬ್ಯಾಂಕಿಂಗೇತರ ಸಂಸ್ಥೆಗಳೂ ಠೇವಣಿಗಳನ್ನು ಸ್ವೀಕರಿಸುವ ಮಾನ್ಯತೆಯನ್ನು ಪಡೆದಿಲ್ಲ. ಬದಲಿಗೆ, ಠೇವಣಿ ಸ್ವೀಕೃತಿ ಮಾನ್ಯತಾಪತ್ರವನ್ನು ಪಡೆದಿರುವ ಸಂಸ್ಥೆಗಳು ಮಾತ್ರ ಠೇವಣಿಯನ್ನು ಸ್ವೀಕರಿಸಬಹುದಾಗಿದೆ. ಆದಾಗ್ಯೂ, ಅವುಗಳಿಗೆ ನಿಗದಿಪಡಿಸಿದ ಮಿತಿಯಲ್ಲಿ ಅಂಥ ಸಂಸ್ಥೆಗಳು ಠೇವಣಿ ಸ್ವೀಕಾರ ಮಾಡಬಹುದಾಗಿದೆ. ನಿರ್ದಿಷ್ಟವಾಗಿ ಮಾನ್ಯತೆ ಪಡೆದಿರುವ ಗೃಹ ಸಾಲ ಸಂಸ್ಥೆಗಳು, ಕೇಂದ್ರ ಸರ್ಕಾರದ ಕಂಪನಿ ನಿಯಮದಡಿ ಮಾನ್ಯತೆ ಪಡೆದ, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ಸುಪರ್ದಿಗೆ ಬರುವ ಸಂಸ್ಥೆಗಳು ನಿಗದಿಪಡಿಸಿದ ಮೊತ್ತವನ್ನು ಠೇವಣಿ ರೂಪದಲ್ಲಿ ಪಡೆಯಬಹುದು. ಕಾರ್ಪೋರೇಟ್ ಕ್ರೆಡಿಟ್ ಸೊಸೈಟಿಗಳು ಕೂಡ ತಮ್ಮ ಸದಸ್ಯರಿಂದ ಠೇವಣಿಯನ್ನು ಸಂಗ್ರಹಿಸಬಹುದು. ಆದರೆ, ಸಾರ್ವಜನಿಕರಿಂದ ಅಲ್ಲ. ಬ್ಯಾಂಕು, ಸಹಕಾರಿ ಬ್ಯಾಂಕುಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಪಡೆದ ಠೇವಣಿಗಳನ್ನು ಮಾತ್ರ ರಿಸರ್ವ್ ಬ್ಯಾಂಕ್ ನಿಯಂತ್ರಿಸುತ್ತದೆ.

ಉಳಿದ ಸಂಸ್ಥೆಗಳು ಠೇವಣಿ ಸಂಗ್ರಹಿಸಲು ಕಾನೂನು ಸಮ್ಮತಿಯಿಲ್ಲ. ಸಂಯೋಜನೆಗೊಂಡಿರದ ವ್ಯಕ್ತಿಗತ ಗುಂಪು,

ಭಾಗತ್ವದ ಸಂಸ್ಥೆಗಳು, ವ್ಯಕ್ತಿಗತ ನೆಲೆಯ ಮತ್ತಿತರ ಸಂಘ–ಸಂಸ್ಥೆಗಳು ಠೇವಣಿ ಸ್ವೀಕಾರವನ್ನು ತಮ್ಮ ತಾತ್ತ್ವಿಕ ಆದ್ಯತಾ ವಹಿವಾಟನ್ನಾಗಿ ನಡೆಸುವುದು ನಿಷೇಧಿತವಾಗಿದೆ. ಇಂಥ ಅಸಂಯೋಜಿತ ಸಂಘಸಂಸ್ಥೆಗಳು, ಅವು ಹಣಕಾಸು ವ್ಯವಹಾರ ನಡೆಸುತ್ತಿದ್ದರೂ ಠೇವಣಿ ಸಂಗ್ರಹಿಸುವ ಪ್ರಕ್ರಿಯೆಯಿಂದ ನಿಷೇಧಿತವಾಗಿವೆ.

## 17. ಆರ್‌ಬಿಐನೊಂದಿಗೆ ನೋಂದಾಯಿತವಾಗಿರುವ ಎಲ್ಲ ಬ್ಯಾಂಕಿಂಗೇತರ ಸಂಸ್ಥೆಗಳೂ ಠೇವಣಿಗಳನ್ನು ಸ್ವೀಕರಿಸಬಹುದೆ? ಆರ್‌ಬಿಐನಲ್ಲಿ ನೋಂದಾಯಿತವಾಗಿದೆ ಎಂದರೆ ಅಂಥ ಸಂಸ್ಥೆ ಠೇವಣಿ ಸ್ವೀಕಾರ ಮಾಡಬಹುದೆಂದೆ?

ಇಲ್ಲ. ಮೇಲೆ ಸ್ಪಷ್ಟಪಡಿಸಿರುವಂತೆ, ಬ್ಯಾಂಕಿಂಗೇತರ ಸಂಸ್ಥೆಗಳು ಆರ್‌ಬಿಐನೊಂದಿಗೆ ನೋಂದಾವಣಿ ಮಾಡಿಕೊಂಡ ತಕ್ಷಣ ಠೇವಣಿ ಸ್ವೀಕರಿಸುವ ಅರ್ಹತೆಯನ್ನು ಪಡೆಯುವುದಿಲ್ಲ. ಆರ್‌ಬಿಐ ನಿರ್ದಿಷ್ಟವಾಗಿ ಠೇವಣಿ ಸ್ವೀಕಾರ ಮಾನ್ಯತೆಯನ್ನು ನೀಡುತ್ತದೆ. ನೋಂದಾಯಿತವಾದ ಬ್ಯಾಂಕಿಂಗೇತರ ಸಂಸ್ಥೆಯ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಮೂರು ವರ್ಷಗಳ ಕಾಲ ಪರೀಕ್ಷಿಸಿದ ಮೇಲೆ ಠೇವಣಿ ಸ್ವೀಕಾರ ಅನುಮತಿಯನ್ನು ನೀಡಲಾಗುತ್ತದೆ. ಬ್ಯಾಂಕಿಂಗೇತರ ಸಂಸ್ಥೆಯು ಸಾರ್ವಜನಿಕರಿಂದ ಠೇವಣಿ ಸ್ವೀಕರಿಸುವ ಅಧಿಕಾರ ಪಡೆದಿದೆಯೇ ಎಂಬುದನ್ನು ನಿರ್ದಿಷ್ಟವಾಗಿ ಸರ್ಟಿಫಿಕೇಟ್‌ನಲ್ಲಿ ನಮೂದಿಸಲಾಗಿರುತ್ತದೆ. ಹಾಗೆ ನೋಡಿದರೆ, ಕೇವಲ ಬ್ಯಾಂಕುಗಳು ಮಾತ್ರ ಸಾರ್ವಜನಿಕ ಠೇವಣಿಗಳನ್ನು ಸ್ವೀಕರಿಸಬೇಕು, ಎಂಬುದು ರಿಸರ್ವ್ ಬ್ಯಾಂಕಿನ ನಿರ್ಧರಿತ ಸಾರ್ವಜನಿಕ ನೀತಿಯಾಗಿದೆ. ಆ ಹಿನ್ನೆಲೆಯಲ್ಲಿಯೇ, ಯಾವುದೇ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗೆ 1997ರಿಂದ ಆಚೆಗೆ, ಸಾರ್ವಜನಿಕ ಠೇವಣಿ ಸ್ವೀಕರಿಸುವ ಮಾನ್ಯತಾ ಪತ್ರವನ್ನು ನೀಡಿಲ್ಲ.

## 18. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಸಾರ್ವಜನಿಕ ಠೇವಣಿ ಸ್ವೀಕರಿಸಲು ಆರ್‌ಬಿಐ ಏಕೆ ಇಷ್ಟೊಂದು ನಿರ್ಬಂಧ ಹೇರಿದೆ?

ಹಣಕಾಸು ಸಂಸ್ಥೆಗಳನ್ನು ಮೇಲ್ವಿಚಾರಣೆ ನಡೆಸುವಾಗ ಠೇವಣಿದಾರರ ಹಿತವನ್ನು ಕಾಪಾಡುವುದು ರಿಸರ್ವ್ ಬ್ಯಾಂಕಿನ ಒಟ್ಟಾರೆ ಗುರಿಯಾಗಿದೆ. ಷೇರು ಸಂಸ್ಥೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ಲಾಭ ನಷ್ಟಗಳ ಸಾಧಕ–ಬಾಧಕಗಳನ್ನು ಅರಿತು ಹಣ ಹೂಡಿಕೆ ಮಾಡಿರುತ್ತಾರೆ. ಆದರೆ, ಠೇವಣಿಯನ್ನು ಇಡುವ ಠೇವಣಿದಾರರು ನಂಬಿಕೆಯನ್ನೇ ಆಧಾರವಾಗಿರಿಸಿಕೊಂಡಿರುತ್ತಾರೆ. ಹಣಕಾಸು ನಿಯಂತ್ರಣದಲ್ಲಿ ಠೇವಣಿದಾರರ ಹಿತಾಸಕ್ತಿಯೇ ಆದ್ಯತೆಯಾಗಿರುತ್ತದೆ. ಬ್ಯಾಂಕುಗಳು ಗರಿಷ್ಠ ಮಿತಿಯಲ್ಲಿ ಹಣಕಾಸು ನಿಯಂತ್ರಣವನ್ನು ಹೊಂದಿದ ಸಂಸ್ಥೆಗಳಾಗಿವೆ. ಒಂದೊಮ್ಮೆ ಬ್ಯಾಂಕು ಠೇವಣಿ ಮರು ನೀಡಿಕೆಯಲ್ಲಿ ವಿಫಲವಾದರೆ, ಇನ್ಶೂರೆನ್ಸ್ ಆಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಶನ್ ಗರಿಷ್ಠ ಒಂದು ಲಕ್ಷ ರೂಗಳನ್ನು ಠೇವಣಿಯ ಬದಲಿಗೆ ನೀಡುತ್ತದೆ.

## 19. ಯಾವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಸಾರ್ವಜನಿಕ ಠೇವಣಿ ಸ್ವೀಕರಿಸಲು ಆರ್‌ಬಿಐನಿಂದ ಮಾನ್ಯತೆ ಪಡೆದಿವೆ?

ಸಾರ್ವಜನಿಕ ಠೇವಣಿ ಸ್ವೀಕಾರಕ್ಕೆ ಆರ್‌ಬಿಐನಿಂದ ಅಧಿಕೃತ ಮಾನ್ಯತೆ ಪಡೆದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಹೆಸರನ್ನು ಆರ್‌ಬಿಐ ತನ್ನ ವೆಬ್‌ಜಾಲದಲ್ಲಿ ಪ್ರಕಟಿಸುತ್ತದೆ.(website: www.rbi.org.in- sitemap-NBFC List- List of NBFCs) ಕೆಲವೊಮ್ಮೆ ತಾತ್ಕಾಲಿಕವಾಗಿ ಕೆಲವು ಸಂಸ್ಥೆಗಳು ಸಾರ್ವಜನಿಕ ಠೇವಣಿ ಸ್ವೀಕರಿಸದಂತೆ ನಿಷೇಧ ಹೇರಲಾಗಿರುತ್ತದೆ. ಹೀಗೆ ನಿಷೇಧಿತ ಸಂಸ್ಥೆಗಳ ಹೆಸರುಗಳನ್ನು ಆರ್‌ಬಿಐ ತನ್ನ ವೆಬ್‌ಜಾಲದಲ್ಲಿ ಪ್ರಕಟಿಸುತ್ತದೆ. ಈ ಎರಡೂ ಪಟ್ಟಿಗಳನ್ನು ಆರ್‌ಬಿಐ ಕಾಲಕಾಲಕ್ಕೆ ಪರಿಷ್ಕರಿಸುತ್ತದೆ. ಬ್ಯಾಂಕಿಗೇತರ ಹಣಕಾಸು ಸಂಸ್ಥೆಗಳಲ್ಲಿ ಠೇವಣಿಯನ್ನಿಡುವ ಮೊದಲು ಸಾರ್ವಜನಿಕರು ಈ ಎರಡೂ ಪಟ್ಟಿಯನ್ನು ಗಮನಿಸುವುದನ್ನು ಆರ್‌ಬಿಐ ನಿರೀಕ್ಷಿಸುತ್ತದೆ.

## 20. ಸಹಕಾರಿ ಕ್ರೆಡಿಟ್ ಸೊಸೈಟಿಗಳು ಸಾರ್ವಜನಿಕ ಠೇವಣಿ ಸಂಗ್ರಹಿಸಬಹುದೆ?

ಇಲ್ಲ. ಸಹಕಾರಿ ಕ್ರೆಡಿಟ್ ಸೊಸೈಟಿಗಳು ಸಾರ್ವಜನಿಕ ಠೇವಣಿಗಳನ್ನು ಸಂಗ್ರಹಿಸುವ ಹಾಗಿಲ್ಲ. ಅಂಥ ಸಂಸ್ಥೆಗಳು ತಮ್ಮ ನಿಯಮಾನುಸಾರ ಸದಸ್ಯರಿಂದ ಠೇವಣಿಗಳನ್ನು ಸ್ವೀಕರಿಸಬಹುದಾಗಿದೆ.

## 21. ವೇತನ ಪಡೆಯುವವರ ಸೊಸೈಟಿ ಸಾರ್ವಜನಿಕ ಠೇವಣಿ ಸ್ವೀಕರಿಸಬಹುದೆ?

ಇಲ್ಲ. ವೇತನ ಪಡೆಯುವವರ ಸೊಸೈಟಿಗಳು ಉದ್ಯೋಗಿಗಳಿಗಾಗಿ ಇದ್ದು, ಆ ಸೊಸೈಟಿಯ ಸದಸ್ಯರುಗಳಿಂದ ಮಾತ್ರ ಠೇವಣಿ ಸಂಗ್ರಹಿಸಬಹುದಲ್ಲದೆ, ಸಾರ್ವಜನಿಕರಿಂದ ಅಲ್ಲ.

## 22. ತನ್ನೊಂದಿಗೆ ನೋಂದಾಯಿತಗೊಳ್ಳದ ಸಂಸ್ಥೆಗಳು ಅಥವ ಅಧಿಕೃತ ಪರವಾನಗಿ ಪಡೆಯದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಅನಧಿಕೃತವಾಗಿ ಸಾರ್ವಜನಿಕ ಠೇವಣಿ ಸಂಗ್ರಹಿಸುತ್ತಿವೆ ಎಂಬುದು ಆರ್‌ಬಿಐ ಗಮನಕ್ಕೆ ಹೇಗೆ ಬರುತ್ತದೆ?

ಇಂಥ ಸಂಸ್ಥೆಗಳು ಅನಧಿಕೃತವಾಗಿ ಠೇವಣಿ ಸಂಗ್ರಹಿಸುತ್ತಿದೆ ಎಂದು ಸಾರ್ವಜನಿಕ ದೂರುದುಮ್ಮಾನಗಳಿಂದ, ಉದ್ಯಮದ ಮೂಲಗಳಿಂದ ಮತ್ತು ಈ ಸಂಸ್ಥೆಗಳ ಲೆಕ್ಕ ಪರಿಶೋಧಕ ವರದಿಗಳಿಂದ ಆರ್‌ಬಿಐಗೆ ಈ ವಿಷಯವು ಗಮನಕ್ಕೆ ಬರುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾಗುವ ವರದಿಗಳಿಂದ; ಪ್ರಾದೇಶಿಕ ಶಾಖೆ ಮತ್ತಿತರ ಮೂಲಗಳಿಂದ ಆರ್‌ಬಿಐ ಮಾಹಿತಿ ಸಂಗ್ರಹಿಸುತ್ತದೆ.

ಇದರೊಂದಿಗೆ, ಹಣಕಾಸು ಸಂಸ್ಥೆಗಳ ನಿಯಂತ್ರಕ ಪ್ರಾಧಿಕಾರಗಳೊಂದಿಗೆ ಸಂಯೋಜನೆ ಸಾಧಿಸುವ ಉದ್ದೇಶದಿಂದ ಆರ್‌ಬಿಐ ತನ್ನ ಎಲ್ಲ ಪ್ರಾದೇಶಿಕ ಶಾಖೆಗಳಲ್ಲಿ ರಾಜ್ಯ ಮಟ್ಟದ ಸಂಯೋಜಕ ಸಮಿತಿಯೊಂದನ್ನು ರಚಿಸಿದೆ (ಎಸ್‌ಎಲ್‌ಸಿಸಿ). ಈ ಸಮಿತಿಯಲ್ಲಿ ರಾಜ್ಯ ಸರ್ಕಾರದ ಗೃಹ ಮತ್ತು ಕಾನೂನು ಇಲಾಖೆಗಳ ಅಧಿಕಾರಿಗಳು, ರಿಜಿಸ್ಟ್ರಾರ್ ಆಫ್ ಕಂಪನೀಸ್, ಕಾರ್ಪೋರೇಟ್ ಸಚಿವಾಲಯದ ಪ್ರಾದೇಶಿಕ ನಿರ್ದೇಶನಾಲಯದ ಅಧಿಕಾರಿಗಳು, ನ್ಯಾಶನಲ್ ಹೌಸಿಂಗ್ ಬ್ಯಾಂಕ್, ಸೆಬಿ, ರೆಜಿಸ್ಟ್ರಾರ್ ಆಫ್ ಚಿಟ್ಸ್, ಮತ್ತು ಐಸಿಎಐ ಸದಸ್ಯರಾಗಿರುತ್ತಾರೆ. ಹಣಕಾಸು

ಕ್ಷೇತ್ರದಲ್ಲಿನ ಆಗುಹೋಗುಗಳ ಮಾಹಿತಿ ವಿನಿಮಯಕ್ಕಾಗಿ ಪ್ರತಿ ವರ್ಷವೂ ಈ ಸಮಿತಿ ಸಭೆ ಸೇರುತ್ತದೆ.

## 23. ಖಾಸಗಿ ಮಾಲೀಕತ್ವ/ಭಾಗೀದಾರ ಸಹಯೋಗಿ/ಸಹಯೋಗಿಯಲ್ಲದ ಬ್ಯಾಂಕಿಂಗೇತರ ಸಂಸ್ಥೆಗಳು ಸಾರ್ವಜನಿಕ ಠೇವಣಿ ಸ್ವೀಕರಿಸಬಹುದೆ?

ಇಲ್ಲ. ಖಾಸಗಿ ಮಾಲೀಕತ್ವ ಮತ್ತು ಭಾಗೀದಾರ ಸಂಸ್ಥೆಗಳು ಅ–ಸಂಯೋಜಕ ಮಂಡಲಿಗಳಾಗಿವೆ. ಈ ಕಾರಣದಿಂದ ಆರ್‌ಬಿಐ, 1934ರ ಕಾಯಿದೆಯಂತೆ ಸಾರ್ವಜನಿಕ ಠೇವಣಿ ಸ್ವೀಕರಿಸಲು ನಿಷೇಧಗೊಂಡಿವೆ.

## 24. ಅನೇಕ ಆಭರಣ ಅಂಗಡಿಗಳು ಸಾರ್ವಜನಿಕರಿಂದ ಕಂತುಗಳನ್ನು ಪಡೆಯುತ್ತವೆ. ಇವನ್ನು ಠೇವಣಿಯೆಂದು ಪರಿಗಣಿಸಬಹುದೆ?

ಹಣವನ್ನು ಮುಂದೆ ನೀಡಲಾಗುವ ಆಭರಣದ ಮುಂಗಡವಾಗಿ ಪಡೆದಿದೆಯೆ? ಅಥವ ಹಣವನ್ನು ಬಡ್ಡಿಯೊಂದಿಗೆ ಹಿಂದಿರುಗಿಸುವ ಭರವಸೆಯೊಂದಿಗೆ ಪಡೆಯಲಾಗಿದೆಯೇ ಎಂಬುದರ ಮೇಲೆ ಈ ಅಂಶ ಅವಲಂಬಿತವಾಗಿರುತ್ತದೆ. ಮುಂದಿನ ದಿನಾಂಕದಲ್ಲಿ ಆಭರಣವನ್ನು ನೀಡುವ ಒಪ್ಪಂದವಾಗಿ ಪಡೆಯುವ ಮುಂಗಡ ಕಂತಿನ ಹಣವನ್ನು ಠೇವಣಿಯಾಗಿ ಪರಿಗಣಿಸಲಾಗದು. ಒಂದೊಮ್ಮೆ ಆಭರಣದಂಗಡಿಯು ಪಡೆಯುತ್ತಿರುವ ಕಂತಿಗೆ ತೀರುವಳಿಯಲ್ಲಿ ಬಡ್ಡಿಯನ್ನು ಸೇರಿಸಿ ಮೂಲಧನವನ್ನು ಮರಳಿ ನೀಡುವ ಭರವಸೆ ನೀಡಿದ್ದರೆ ಅದು ಠೇವಣಿಯಾಗುತ್ತದೆ.

## 25. ಅನಿಯಮಿತ ಸಂಸ್ಥೆಗಳು ಸಾರ್ವಜನಿಕ ಠೇವಣಿ ಸ್ವೀಕರಿಸಿದರೆ ಯಾವ ಬಗೆಯ ಕ್ರಮ ತೆಗೆದುಕೊಳ್ಳಬಹುದು? ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಅಧಿಕೃತ ಮಾನ್ಯತೆ ಪಡೆದಿಲ್ಲದಿದ್ದರೂ ಖಾಸಗಿ ಸ್ವಾಮ್ಯ/ಭಾಗೀದಾರ ಸಂಸ್ಥೆಗಳ ಪ್ರವರ್ತಕರ ಮೂಲಕ ಸಾರ್ವಜನಿಕ ಠೇವಣಿ ಸಂಗ್ರಹಿಸಿದರೆ ಏನು ಮಾಡಬೇಕು?

ಅಸಂಯೋಜಿತ ಸಂಸ್ಥೆಗಳು ಸಾರ್ವಜನಿಕ ಠೇವಣಿ ಸಂಗ್ರಹಿಸುತ್ತಿರುವ ಸಂದರ್ಭದಲ್ಲಿ ಅಪರಾಧಿ ಸಂಹಿತೆಯಡಿ ಕ್ರಮ ಜರುಗಿಸಬಹುದು. ಜತೆಗೆ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಅ–ಸಂಯೋಜಿತ ಸಂಸ್ಥೆಗಳೊಂದಿಗೆ ಕೈಜೋಡಿಸುವುದನ್ನು ಆರ್‌ಬಿಐ ನಿಷೇಧಿಸಿದೆ. ಒಂದೊಮ್ಮೆ ಇಂಥ ಸಂಸ್ಥೆಗಳು ಖಾಸಗಿಸ್ವಾಮ್ಯ/ಭಾಗೀದಾರ ಸಂಸ್ಥೆಗಳ ಮೂಲಕ ಆರ್‌ಬಿಐ ನಿಯಮಗಳ ಹೊರತಾಗಿಯೂ ಸಾರ್ವಜನಿಕ ಠೇವಣಿ ಸಂಗ್ರಹಿಸುವುದು ಗಮನಕ್ಕೆ ಬಂದರೆ, ಅಂಥ ಸಂಸ್ಥೆಗಳನ್ನು ಅಪರಾಧ ಸಂಹಿತೆಯಡಿ ವಿಚಾರಣೆ ನಡೆಸಲಾಗುವುದು. ಅಥವ ರಾಜ್ಯ ಸರ್ಕಾರಗಳು ಜಾರಿ ತಂದಿದ್ದರೆ ಠೇವಣಿದಾರರ ಹಿತಾಸಕ್ತಿ ಕಾಯಿದೆಯಡಿ (ಹಣಕಾಸು ಸಂಸ್ಥೆಗಳು) ಕ್ರಮ ಜರುಗಿಸಬಹುದು.

## 26. ತಮ್ಮ ವಹಿವಾಟು ತಾತ್ತ್ವಿಕ ಆದ್ಯತಾ ವಹಿವಾಟು ಆಗಿಲ್ಲದ ಸನ್ನಿವೇಶದಲ್ಲಿ, ಆರ್‌ಬಿಐನ ಅಗತ್ಯ ಮಾನ್ಯತೆ ಪತ್ರವಿಲ್ಲದಿದ್ದ ಸಂದರ್ಭದಲ್ಲಿ ಸಂಸ್ಥೆಗಳು ಸಾಲ ನೀಡುವುದು ಅಥವ ಹೂಡಿಕೆಯಲ್ಲಿ

**ತೊಡಗಿರುವುದು ಕಂಡು ಬಂದರೆ ಯಾವ ಬಗೆಯ ಕ್ರಮ ಜರುಗಿಸಲಾಗುತ್ತದೆ?**

ಸಂಸ್ಥೆಗಳು ರಿಸರ್ವ್ ಬ್ಯಾಂಕಿನಿಂದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಾಗಿ ನೋಂದಣಿ ಹೊಂದಬೇಕಾದರೆ, ಅಂಥ ಸಂಸ್ಥೆಗಳು ಬ್ಯಾಂಕಿಂಗೇತರ ಹಣಕಾಸು ವಹಿವಾಟುಗಳಲ್ಲಿ, ಉದಾಹರಣಗೆ, ಸಾಲ ನೀಡಿದೆ, ಅಥವ ಠೇವಣಿ ಸಂಗ್ರಹಣೆಗಳನ್ನು ತಮ್ಮ ತಾತ್ತ್ವಿಕ ಆದ್ಯತಾ ವಹಿವಾಟಾಗಿ ಹೊಂದಿರಬೇಕು. ನೋಂದಾವಣಿ ಇಲ್ಲದೆ ವಹಿವಾಟು ಮಾಡುತ್ತಿದ್ದರೆ, ರಿಸರ್ವ್ ಬ್ಯಾಂಕ್ ಅಂಥ ಸಂಸ್ಥೆಗಳಿಗೆ ದಂಡ ಹಾಕಬಹುದು ಅಥವ ಕಾನೂನು ಪ್ರಕಾರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು. ಸಾರ್ವಜನಿಕರು ಒಂದೊಮ್ಮೆ ಆರ್‌ಬಿಐ ವೆಬ್‌ಜಾಲದ ಪಟ್ಟಿಯಲ್ಲಿಲ್ಲದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ ಈ ಬಗೆಯ ವಹಿವಾಟು ನಡೆಸುತ್ತಿದ್ದರೆ ಹತ್ತಿರದ ಪ್ರಾದೇಶಿಕ ಕಚೇರಿಗೆ ದೂರು ನೀಡಿದರೆ ಆರ್‌ಬಿಐ 1934ರ ಕಾಯಿದೆಯನ್ವಯ ಕ್ರಮ ಜರುಗಿಸಲಾಗುವುದು.

**27. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಸಾಲಗಾರರ ಮೇಲೆ ಅಧಿಕ ಬಡ್ಡಿ ಹೇರುತ್ತಿದ್ದಾರೆ. ಈ ಸಂಸ್ಥೆಗಳು ಸಾಲಗಾರರಿಗೆ ವಿಧಿಸುವ ಬಡ್ಡಿಯ ಮೇಲೆ ಯಾವುದಾದರೂ ಮಿತಿ ನಿರ್ಧರಿಸಲಾಗಿದೆಯೇ?**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹಣಕಾಸು ಸಂಸ್ಥೆಗಳು ಸಾಲಗಾರರಿಗೆ ವಿಧಿಸುವ ಬಡ್ಡಿಯನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡಿಲ್ಲ (ಬ್ಯಾಂಕಿಂಗೇತರ ಮತ್ತು ಸಣ್ಣ ಹಣಕಾಸು ಸಂಸ್ಥೆಗಳನ್ನು ಹೊರತುಪಡಿಸಿ). ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ ಮತ್ತು ಸಾಲಗಾರರ ಮಧ್ಯೆ ಸಾಲ ಪಡೆವಾಗಿನ ನೀತಿನಿಯಮಗಳು ಆಗಿನ ಒಪ್ಪಂದದ ಮೇಲೆ ಆಧಾರವಾಗಿರುತ್ತದೆ. ಆದಾಗ್ಯೂ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಪಾರದರ್ಶಕವಾಗಿರಬೇಕಿದ್ದು, ಬಡ್ಡಿದರ ಮತ್ತು ಆ ಬಡ್ಡಿ ದರವನ್ನು ವಿಧಿಸಲು ಅನುಸರಿಸಿದ ವಿಧಾನಗಳ ಕುರಿತು ಸಾಲಗಾರರಿಗೆ ಅಥವ ಗ್ರಾಹಕರಿಗೆ ಒದಗಿಸುವ ಅರ್ಜಿಯಲ್ಲಿ ನಮೂದಿಸಿರಬೇಕು. ಮತ್ತು ಸಾಲ ಮಂಜೂರಾತಿ ಪತ್ರದಲ್ಲಿ ವಿವರಿಸಿರಬೇಕು.

**28. ಆರ್‌ಬಿಐನಿಂದ ಮಾನ್ಯತೆ ಪಡೆಯಲಾಗಿದೆ ಎಂದು ಸುಳ್ಳು ಹೇಳುವ ವ್ಯಕ್ತಿ, ಹಣಕಾಸು ಸಂಸ್ಥೆಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಬಹುದು?**

ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುವ ಕಾರಣಕ್ಕಾಗಿ ಹಣಕಾಸು ಸಂಸ್ಥೆಗಳು ಅಥವ ಅಸಂಯೋಜಿತ ನಿಗಮಗಳು ರಿಸರ್ವ್ ಬ್ಯಾಂಕ್ ಆಫ್ ಇಂಡಿಯದಿಂದ ಮಾನ್ಯತೆ ಪಡೆಯಲಾಗಿದೆ ಎಂದು ಸುಳ್ಳು ಹೇಳಿದ ಪಕ್ಷದಲ್ಲಿ ಅದು ಅಕ್ಷಮ್ಯ ಅಪರಾಧವಾಗಿದೆ. ಮತ್ತು ಭಾರತೀಯ ದಂಡ ಸಂಹಿತೆಯ ಪ್ರಕಾರ ಕ್ರಮ ಜರುಗಿಸಬಹುದಾಗಿದೆ. ಈ ಕುರಿತು ಮಾಹಿತಿಯನ್ನು ಹತ್ತಿರದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಮತ್ತು ಪೊಲೀಸ್ ಠಾಣೆಗೆ ರವಾನಿಸಬಹುದಾಗಿದೆ.

**29. ಚಿಟ್ ಸಂಸ್ಥೆಗಳು ಹಣ ಸ್ವೀಕರಿಸುವುದಕ್ಕೂ, ಠೇವಣಿ ಸ್ವೀಕರಿಸುವುದಕ್ಕೂ ಇರುವ ವ್ಯತ್ಯಾಸವೇನು?**

ಆರ್‌ಬಿಐ 1934ರ ಕಾಯಿದೆಯ ಪ್ರಕಾರ ಷೇರು ಬಂಡವಾಳ, ಬ್ಯಾಂಕಿನಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ

ಹಣ, ಭದ್ರತೆ ಠೇವಣಿ, ಮುಂಗಡ ಪಾವತಿ ಮತ್ತು ವಸ್ತುಗಳ ಖರೀದಿ ಅಥವ ಸೇವೆಗಾಗಿ ನೀಡುವ ಮುಂಗಡ ಮತ್ತು ಚಿಟ್‌ಗಳ ಚಂದಾ ಹಣವನ್ನು ಹೊರತುಪಡಿಸಿ ಸ್ವೀಕರಿಸುವ ಮೊಬಲಗನ್ನು ಠೇವಣಿ ಎಂದು ವಿವರಿಸಲಾಗಿದೆ. ಸಾಲವಾಗಿ ಪಡೆದಿರುವ ಅಥವ ಯಾವುದೇ ಸ್ವರೂಪದ ಮೊಬಲಗನ್ನು ಠೇವಣಿ ಎಂದು ಪರಿಗ್ರಹಿಸಲಾಗಿದೆ. ಚಿಟ್ ಫಂಡ್ ಚಟುವಟಿಕೆಯು ಚಂದಾ ರೂಪದಲ್ಲಿ ಸದಸ್ಯರಿಂದ ಸ್ವೀಕರಿಸುವ ವಂತಿಗೆಯಾಗಿರುತ್ತದೆ. ಮತ್ತು ಸರತಿಯ ಆಧಾರದವ ಮೇಲೆ ಚಿಟ್ ಸದಸ್ಯರು ಚಿಟ್ ಹಣವನ್ನು ಪಡೆಯುತ್ತಾರೆ. ಈ ಚಂದಾ ಹಣವು ಠೇವಣಿಯ ಅರ್ಥ ವಿವರಣೆಯಲ್ಲಿ ಒಳಗೊಂಡಿಲ್ಲವಾದ್ದರಿಂದ ಇವನ್ನು ಠೇವಣಿ ಎಂದು ಕರೆಯಲಾಗುವುದಿಲ್ಲ. ಚಿಟ್ ಸಂಸ್ಥೆಗಳು ಮೇಲೆ ಹೇಳಿದ ರೀತಿಯಲ್ಲಿ ಚಂದಾ ವಂತಿಗೆಯನ್ನು ಸಂಗ್ರಹಿಸಬಹುದಾಗಿದ್ದು, 2009, ಆಗಸ್ಟ್ ಮಾಸದಿಂದ ಠೇವಣಿ ಸಂಗ್ರಹಿಸುವಂತಿಲ್ಲ ಎಂದು ರಿಸರ್ವ್ ಬ್ಯಾಂಕ್ ಸೂಚಿಸಿದೆ.

## 30. ಸಾಲ ನೀಡುವ ಮತ್ತು ಹೂಡಿಕೆ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಠೇವಣಿಗಳನ್ನು ಸ್ವೀಕರಿಸದ ಬ್ಯಾಂಕಿಂಗೇತರ ಸಂಸ್ಥೆಗಳ ಪಟ್ಟಿಯು ಎಲ್ಲಿ ದೊರೆಯುತ್ತದೆ.

ಸಾಲ ನೀಡುವ ಮತ್ತು ಹೂಡಿಕೆ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಠೇವಣಿಗಳನ್ನು ಸ್ವೀಕರಿಸದ, ಅಧಿಕೃತ ನೋಂದಣಿ ಪತ್ರವನ್ನು ಹೊಂದಿರುವ ಬ್ಯಾಂಕಿಂಗೇತರ ಸಂಸ್ಥೆಗಳ ಪಟ್ಟಿಯು ಆರ್‌ಬಿಐ website: www.rbi.org.in- sitemap-NBFC List- List of NBFCs not accepting public deposits ಇಲ್ಲಿ ದೊರೆಯುತ್ತದೆ.

## ಜಿ. ಠೇವಣಿ ಸುರಕ್ಷತೆಯ ಅಂಶಗಳು

## 31. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಲ್ಲಿ ಠೇವಣಿಯನ್ನು ಇಡುವ ಮುನ್ನ ಗ್ರಾಹಕ ಯಾವ ಬಗೆಯ ಎಚ್ಚರಿಕೆಯನ್ನು ವಹಿಸಬೇಕು?

ಗ್ರಾಹಕರು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಲ್ಲಿ ಠೇವಣಿಯನ್ನಿರಿಸುವ ಮುಂಚೆ ಕಡ್ಡಾಯವಾಗಿ ಈ ಅಂಶಗಳನ್ನು ಗಮನಿಸಬೇಕು:

ಸಂಸ್ಥೆಯು ಆರ್‌ಬಿಐನೊಂದಿಗೆ ನೋಂದಾಯಿಸಿಕೊಂಡಿದೆಯೇ ಮತ್ತು ವಿಶೇಷವಾಗಿ ಠೇವಣಿಗಳನ್ನು ಸ್ವೀಕರಿಸುವ ಪರವಾನಗಿ ಹೊಂದಿದೆಯೇ. ಅಧಿಕೃತ ಪರವಾನಗಿ ಹೊಂದಿರುವ ಅಂಥ ಸಂಸ್ಥೆಗಳ ಪಟ್ಟಿಯನ್ನು ಆರ್‌ಬಿಐ ವೆಬ್‌ಜಾಲದಲ್ಲಿ ಪ್ರಕಟಿಸಿ, ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿರುತ್ತದೆ: website: www.rbi.org.in- sitemap-NBFC List. ಗ್ರಾಹಕರು ಸಾರ್ವಜನಿಕ ಠೇವಣಿ ಸ್ವೀಕರಿಸಲು ಮಾನ್ಯತೆ ಪಡೆಯದಿರುವ, ನಿಷೇಧಿಸಿದ ಸಂಸ್ಥೆಗಳ ಪಟ್ಟಿ ಇಲ್ಲಿ ಲಭ್ಯವಿದ್ದು ಗ್ರಾಹಕರು ಗಮನಿಸಬೇಕು: website: www.rbi.org.in- sitemap-NBFC List - NBFCs). ಅಧ್ಯಾಯ: IIIB, IIIC ಅಡಿ ಪರಿಸಮಾಪ್ತಿ ಅರ್ಜಿ ದಾಖಲಾಗಿರುವ, ನಿಷೇಧ ಆದೇಶಗಳನ್ನು ಪಡೆದಿರುವ ವಿವರಗಳೂ ಇಲ್ಲಿ ಲಭ್ಯವಿವೆ.

ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ತಮ್ಮ ವೆಬ್‌ಪುಟದಲ್ಲಿ ಆರ್‌ಬಿಐ ನೀಡಿರುವ ನೋಂದಾವಣಿ ಪತ್ರವನ್ನು ಎಲ್ಲರೂ ಗಮನಿಸುವಂತೆ ಪ್ರಕಟಪಡಿಸಿರಬೇಕು. ಮಾತ್ರವಲ್ಲ, ಮಾನ್ಯತಾ ಪತ್ರವು ಸಂಸ್ಥೆ ಠೇವಣಿಗಳನ್ನು ಸ್ವೀಕರಿಸಲು ವಿಶೇಷ ಪರವಾನಗಿ ಪಡೆದಿದೆ ಎಂಬ ಅಂಶವು ಒಳಗೊಂಡಿರಬೇಕು. ಸಂಸ್ಥೆಯು ಈ ಬಗೆಯ ಮಾನ್ಯತಾ ಪತ್ರ ಪಡೆದಿರುವ ಕುರಿತು ಗ್ರಾಹಕರು ತಪಾಸಣೆ ನಡೆಸಬೇಕು.

ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಗ್ರಾಹಕರಿಗೆ ನೀಡುವ ಬಡ್ಡದರವು 12.5% ಮೀರಬಾರದು. ದೊಡ್ಡಗಾತ್ರದ ಆರ್ಥಿಕ ಸನ್ನಿವೇಶವನ್ನು ಅನುಸರಿಸಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಬಡ್ಡಿದರಗಳನ್ನು ಪರಿಷ್ಕರಿಸುತ್ತಿರುತ್ತದೆ. ಪರಿಷ್ಕೃತ ಬಡ್ಡಿದರಗಳನ್ನು ರಿಸರ್ವ್ ಬ್ಯಾಂಕ್ ತನ್ನ ವೆಬ್‌ಪುಟದಲ್ಲಿ ಪ್ರಕಟಿಸುತ್ತದೆ: website: www.rbi.org.in- sitemap-NBFC List- FAQs.

ಸಂಸ್ಥೆಯೊಂದಿಗೆ ಇಟ್ಟ ಪ್ರತಿ ಠೇವಣಿಗೂ ಸಮರ್ಪಕ ರಸೀದಿ ನೀಡುವಂತೆ ಗ್ರಾಹಕರು ಒತ್ತಾಯಿಸಬೇಕು. ಸಂಸ್ಥೆ ನೀಡುವ ರಸೀದಿಯಲ್ಲಿ ಅಧಿಕೃತ ಅಧಿಕಾರವನ್ನು ಪಡೆದಿರುವವರು ಹಸ್ತಾಕ್ಷರ ಮಾಡಿರಬೇಕು. ಮಾತ್ರವಲ್ಲ, ಠೇವಣಿ ಇಟ್ಟ ದಿನಾಂಕ, ಠೇವಣಿದಾರರ ಹೆಸರು, ಇಟ್ಟ ಮೊಬಲಗಿನ ಅಕ್ಷರ ಮತ್ತು ಅಂಕಿ ರೂಪದ ವಿವರ, ಬಡ್ಡಿದರ, ತೀರುವಳಿಯ ದಿನಾಂಕ ಮತ್ತು ನೀಡುವ ಮೊತ್ತವನ್ನು ಸ್ಪಷ್ಟವಾಗಿ ನಮೂದಿರಿಸಬೇಕು.

## 32. ಅಧಿಕ ಬಡ್ಡಿಯ ಆಮಿಷವನ್ನು ಒಡ್ಡುವ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿದಾಗ ಹಣ ಕಳೆದುಕೊಳ್ಳುವ ಅಪಾಯವಿರುತ್ತದೆ ಎಂಬ ಮುನ್ಸೂಚನೆಯನ್ನು ಗ್ರಾಹಕರು ಹೇಗೆ ಪಡೆಯಬೇಕು?

ಗ್ರಾಹಕರು ಅಧಿಕ ಮೊತ್ತದ ಬಡ್ಡಿಯ ಆಮಿಷವನ್ನು ಒಡ್ಡುತ್ತಿರುವ ಸಂಸ್ಥೆಯಲ್ಲಿ ಠೇವಣಿ ಇಡುವ ಮೊದಲು ಆ ಸಂಸ್ಥೆಯು ಯಾವುದಾದರೂ ಹಣಕಾಸು ನಿಯಂತ್ರಣ ಪ್ರಾಧಿಕಾರದೊಂದಿಗೆ ನೋಂದಾಯಿಸಿಕೊಂಡಿದೆಯೋ, ಇಲ್ಲವೋ ಎಂಬುದನ್ನು ಮತ್ತು ಆ ಸಂಸ್ಥೆಯು ಠೇವಣಿಯ ರೂಪದಲ್ಲಿ ಅಥವ ಇನ್ನಾವುದೇ ರೂಪದಲ್ಲಿ ನಿಧಿಯನ್ನು ಸಂಗ್ರಹಿಸುವ ಮಾನ್ಯತೆಯನ್ನು ಪಡೆದಿದೆಯೇ? ಎಂಬುದನ್ನು ಅವಶ್ಯ ಗಮನಿಸಬೇಕು. ಅಧಿಕ ಪ್ರಮಾಣದ ಬಡ್ಡಿದರ ಅಥವ ತೀರುವಳಿ ಮೊತ್ತವನ್ನು ನೀಡುವ ಆಮಿಷಗಳ ಕುರಿತು ಗ್ರಾಹಕರು ಸದಾ ಜಾಗರೂಕರಾಗಿರಬೇಕು. ಸಂಸ್ಥೆಯು ನೀಡಿರುವ ಭರವಸೆಗಿಂತ ಹೆಚ್ಚಿನ ಆದಾಯ ಗಳಿಸಬಲ್ಲ ಸಾಮರ್ಥ್ಯ ಹೊಂದಿದ್ದು, ಮರುಪಾವತಿಯಲ್ಲಿ ಗ್ರಾಹಕರ ಹಿತವನ್ನು ಕಾಪಾಡಬಲ್ಲುದೇ, ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಅಧಿಕ ಆದಾಯ ಪಡೆಯಲು ಸಂಸ್ಥೆಯು ಅಧಿಕ ಅಪಾಯವಿರುವ ಹೂಡಿಕೆಯನ್ನು ಮಾಡಬೇಕಾಗುತ್ತದೆ. ಅಧಿಕ ಅಪಾಯ ಮತ್ತು ಕಾಲ್ಪನಿಕ ಹೂಡಿಕೆಗಳು ಅಧಿಕ ಮರು ಆದಾಯವನ್ನು ತರಲಾರವು. ಆದ್ದರಿಂದಲೇ ಅತಿಯಾದ ಬಡ್ಡಿ ಅಥವ ಮರುಗಳಿಕೆ ಆಶ್ವಾಸನೆ ನೀಡುವ ಹೂಡಿಕೆಗಳು ಅಪಾಯಕಾರಿ ಎಂದು ಗ್ರಾಹಕರು ಮನದಟ್ಟು ಮಾಡಿಕೊಳ್ಳಬೇಕು.

## 33. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಸಂಗ್ರಹಿಸಿದ ಠೇವಣಿಗಳ ಮರುಪಾವತಿಗೆ ಆರ್‌ಬಿಐ ಖಾತರಿ ನೀಡುತ್ತದೆಯೇ?

ಇಲ್ಲ. ಒಂದೊಮ್ಮೆ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಠೇವಣಿ ಸಂಗ್ರಹಿಸುವ ಅಧಿಕೃತ ಮಾನ್ಯತೆಯನ್ನು

ಆರ್‌ಬಿಐನಿಂದ ಪಡೆದಿದ್ದ ಸಂದರ್ಭಗಳಲ್ಲಿ ಕೂಡ, ಸಂಸ್ಥೆಗಳಿಂದ ಬರಬೇಕಾದ ಠೇವಣಿ ಮರುಪಾವತಿಯ ಕುರಿತು ಆರ್‌ಬಿಐ ಯಾವುದೇ ರೀತಿಯ ಖಾತರಿಯನ್ನು ನೀಡುವುದಿಲ್ಲ. ಆದ್ದರಿಂದಲೇ, ಗ್ರಾಹಕರು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಲ್ಲಿ ಠೇವಣಿ ಇಡುವ ಸಂದರ್ಭದಲ್ಲಿ ವಿವೇಚನೆಯನ್ನು ಬಳಸಿ ನಿರ್ಧಾರ ತೆಗೆದುಕೊಳ್ಳಬೇಕಿದೆ.

## 34. ಹಣಕಾಸು ಸಂಸ್ಥೆ ಒಂದೊಮ್ಮೆ ಗ್ರಾಹಕನಿಗೆ ಮೂಲ ಬಡ್ಡಿ ಸಹಿತ ಠೇವಣಿ ಮೊತ್ತ ಮರುಪಾವತಿ ಮಾಡದಿರುವ ಸನ್ನಿವೇಶದಲ್ಲಿ ಗ್ರಾಹಕ ಯಾವ ರೀತಿಯ ಕ್ರಮ ಕೈಗೊಳ್ಳಬೇಕು?

ಆರ್‌ಬಿಐನೊಂದಿಗೆ ಅಧಿಕೃತ ನೋಂದಣಿ ಹೊಂದಿರುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯು ಒಂದೊಮ್ಮೆ ಗ್ರಾಹಕರ ಠೇವಣಿಯನ್ನು ಮರುಪಾವತಿ ಮಾಡದಿದ್ದಲ್ಲಿ ಹತ್ತಿರದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯದ ಪ್ರಾದೇಶಿಕ ಶಾಖೆಗೆ ದೂರು ಸಲ್ಲಿಸಬಹುದು. ಜತೆಗೆ, ಕಂಪನಿ ಕಾಯಿದೆ 1956ರ ಪ್ರಕಾರ ರಚಿಸಲಾದ ಕಂಪನಿ ಲಾ ಬೋರ್ಡ್ ಅನ್ನು ಸಂಪರ್ಕಿಸಬಹುದು. ಅಥವ ಸಿವಿಲ್ ನ್ಯಾಯಾಲಯ ಅಥವ ಗ್ರಾಹಕ ದೂರು ದುವ್ಯಾ಼ನ ವೇದಿಕೆಗಳಲ್ಲಿ ಮರುಪಾವತಿಗಾಗಿ ಮೊಕದ್ದಮೆ ಹೂಡಬಹುದು. ಮಾತ್ರವಲ್ಲ, ಶೋಷಣೆಗೊಳಗಾದವರು ರಾಜ್ಯ ಪೊಲೀಸ್ ವ್ಯವಸ್ಥೆ/ಆರ್ಥಿಕ ಅಪರಾಧ ವಿಭಾಗಗಳನ್ನು ಸಂಪರ್ಕಿಸಬಹುದು. ಕೆಲವು ರಾಜ್ಯಗಳು ಹೂಡಿಕೆದಾರರ ಹಿತರಕ್ಷಣೆ ಕಾಯಿದೆ (ಆರ್ಥಿಕ ಸಂಸ್ಥೆಗಳು) ಜಾರಿ ತಂದಿದ್ದು, ಅಂಥ ಸಂಸ್ಥೆಗಳ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡು ಠೇವಣಿದಾರರಿಗೆ ಹಂಚುವ ಅಧಿಕಾರವನ್ನು ಹೊಂದಿವೆ.

## 35. ವಿನಾಯಿತಿಯನ್ನು ಪಡೆದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಠೇವಣಿಗಳನ್ನು ಸ್ವೀಕರಿಸುವ/ಹಿಡಿದಿಡುವುದಕ್ಕೆ ಅರ್ಹತೆ ಪಡೆದಿವೆಯೇ?

ಇಲ್ಲ. ಆರ್‌ಬಿಐ ಕಾಯಿದೆ ಅಥವ ಅದರ ನಿರ್ದೇಶನಗಳಿಂದ ವಿನಾಯಿತಿಯನ್ನು ಪಡೆದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಸಾರ್ವಜನಿಕರಿಂದ ಠೇವಣಿ ಸ್ವೀಕಾರ ಅಥವ ತಡೆಹಿಡಿಯುವ ಪ್ರಕ್ರಿಯೆಯನ್ನು ಕೈಗೊಳ್ಳಲಾರವು. ಏಕೆಂದರೆ, ಠೇವಣಿ ಸ್ವೀಕರಿಸದಿರುವ/ ಹಿಡಿದಿಡಿಯದಿರುವ ಕಾರಣಕ್ಕಾಗಿಯೇ ಅವುಗಳಿಗೆ ಅಂಥ ವಿನಾಯಿತಿಯನ್ನು ನೀಡಲಾಗಿದೆ. ಇನ್ನೊಂದೆಡೆ, ಗೃಹ ಸಾಲ ಹಣಕಾಸು ಸಂಸ್ಥೆಗಳು ರಾಷ್ಟ್ರೀಯ ಗೃಹ ಮಂಡಳಿ ನಿಗದಿಪಡಿಸಿದ ನಿಯಮಾನುಸಾರ ಠೇವಣಿಗಳನ್ನು ಸ್ವೀಕರಿಸಬಹುದಾಗಿದೆ.

## 36. ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡಿದ ಗ್ರಾಹಕರ ಹಿತಾಸಕ್ತಿ ಕಾಪಾಡಲು ಆರ್‌ಬಿಐ ಏನು ಮಾಡುತ್ತದೆ?

ಠೇವಣಿಗಳ ಪ್ರಮಾಣವನ್ನೂ ಒಳಗೊಂಡಂತೆ ಠೇವಣಿ ಸ್ವೀಕಾರ, ಕಡ್ಡಾಯ ಕಡ ಶ್ರೇಯಾಂಕ, ಠೇವಣಿದಾರರಿಗೆ ಮರುಪಾವತಿಸಲು ಕಡ್ಡಾಯವಾಗಿ ಹೊಂದಿರಬೇಕಾದ ದ್ರವ್ಯರೂಪಿ ಸ್ವತ್ತುಗಳು, ಠೇವಣಿ ಪುಸ್ತಕಗಳನ್ನು ನಿರ್ವಹಿಸಬೇಕಾದ ವಿಧಾನ, ಮುಂದಾಲೋಚನೆಯ ಕ್ರಮವಾಗಿ ಹೊಂದಿರಬೇಕಾದ ಸಮರ್ಪಕ ಬಂಡವಾಳದ ನಿರ್ವಹಣೆ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಪರಿಶೋಧನೆ ಮತ್ತು ಪ್ರಕಟಣೆಗಳಿರುವ ಇತಿಮಿತಿ, ಸಂಸ್ಥೆಗಳು

ಸದೃಢ ನೀತಿಗಳ ಮೇಲೆ ಕಾರ್ಯನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ವಿವರವಾದ ನೀತಿಯನ್ನು ನಿರೂಪಿಸಿದೆ. ಬ್ಯಾಂಕ್ ತನ್ನ ಶೋಧನೆ ಅಥವ ಲೆಕ್ಕಪರಿಶೋಧನೆಯ ಮೂಲಕ ಅಥವ ಯಾವುದೇ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯ ಲೆಕ್ಕ ಪರಿಶೋಧನೆಯ ಮೂಲಕ, ಮಾರುಕಟ್ಟೆ ಗುಪ್ತಚರ ವರದಿಯ ಮೂಲಕ ಬ್ಯಾಂಕು ಆರ್‌ಬಿಐ ನಿರ್ದೇಶನಗಳನ್ನು ಪಾಲಿಸುತ್ತಿಲ್ಲವೆಂದು ತಿಳಿದಲ್ಲಿ, ಮುಂದೆ ಠೇವಣಿಗಳನ್ನು ಸ್ವೀಕರಿಸದಿರುವಂತೆ ಆರ್‌ಬಿಐ ನಿರ್ದೇಶನ ನೀಡಬಹುದು. ಮತ್ತು ಸ್ವತ್ತು ಮಾರಾಟವನ್ನು ನಿಷೇಧಿಸಬಹುದು. ಮತ್ತು ಠೇವಣಿದಾರ ಕಂಪನಿ ಲಾ ಬೋರ್ಡ್‌ಗೆ ದೂರು ನೀಡಿದ್ದು, ಮರುಪಾವತಿ ಮಾಡುವಂತೆ ಬೋರ್ಡ್ ನೀಡಿದ ನಿರ್ದೇಶನವನ್ನು ಬ್ಯಾಂಕಿಂಗೇತರ ಸಂಸ್ಥೆ ಪಾಲಿಸಿಲ್ಲದಿರುವ ಪಕ್ಷದಲ್ಲಿ ಅಂಥ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯ ವಿರುದ್ಧ ಆರ್‌ಬಿಐ ಅಪರಾಧ ಕ್ರಮವನ್ನೂ ಒಳಗೊಂಡು ಕ್ರಮ ಕೈಗೊಳ್ಳಬಹುದು. ಸಂಸ್ಥೆಯನ್ನು ಪರಿಸಮಾಪ್ತಿಗೊಳಿಸುವಂತೆ ಸೂಚಿಸಬಹುದು.

ಇದಕ್ಕೂ ಮುಖ್ಯವಾದುದೆಂದರೆ, ದಂಡ ವಿಧಿಸುವುದನ್ನೂ ಒಳಗೊಂಡು ಆರ್‌ಬಿಐ ಕ್ಷಿಪ್ರಗತಿಯ ಕ್ರಮ ಕೈಗೊಳ್ಳುತ್ತದೆ. ಮತ್ತು ಮಾರುಕಟ್ಟೆ ವರದಿ, ದೂರು, ಸಂಸ್ಥೆಗಳ ಲೆಕ್ಕಪರಿಶೋಧಕರು ನೀಡಿದ ವರದಿಗಳು, ಎಸ್‌ಎಲ್‌ಸಿಸಿ ಸಭೆಯ ಮೂಲಕ ಪಡೆದ ಮಾಹಿತಿಗಳನ್ನು ಆಧರಿಸಿ ಆರ್‌ಬಿಐ ಆದೇಶಗಳನ್ನು/ನೀತಿಗಳನ್ನು ಪಾಲಿಸದಿರುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ವಿರುದ್ಧ ಆರ್‌ಬಿಐ ಕಠಿಣ ಕ್ರಮ ಕೈಗೊಳ್ಳುತ್ತದೆ. ಈ ಮಾಹಿತಿಯನ್ನು ಆರ್‌ಬಿಐ ತಕ್ಷಣವೇ ಎಲ್ಲ ನಿಯಂತ್ರಕ ಪ್ರಾಧಿಕಾರಗಳಿಗಳೊಂದಿಗೆ, ರಾಜ್ಯ ಮಟ್ಟದ ಸಂಯೋಜನಕ ಸಮಿತಿ ಸಭೆಯ ಜಾರಿ ಏಜೆನ್ಸಿಗಳಿಗೆ ರವಾನಿಸುತ್ತದೆ.

ದೇಶದ ಪ್ರಮುಖ ನೀತಿನಿರೂಪಣಾ ಘಟಕವಾಗಿ, ಸಾರ್ವಜನಿಕ ನೀತಿಯ ಕ್ರಮವಾಗಿ ಆರ್‌ಬಿಐ ಸಾರ್ವಜನಿಕರು ತಮ್ಮ ಪರಿಶ್ರಮದಿಂದ ಗಳಿಸಿದ ಹಣವನ್ನು ಹೂಡಿಕೆ ಮಾಡಬೇಕಾದಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕುರಿತು ಅರಿವು ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತದೆ. ಮುದ್ರಣ ಮಾಧ್ಯಮದ ಮೂಲಕ ಜಾಹೀರಾತು ನೀಡುವುದು, ಮಾಹಿತಿ ಒಳಗೊಂಡ ಪ್ರಚಾರ ಸಾಹಿತ್ಯದ ಪ್ರಕಟಣೆ ಮತ್ತು ಹಂಚಿಕೆ, ಅರಿವು ಮೂಡಿಸುವ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರನ್ನು ತಲುಪುವುದು ಆರ್‌ಬಿಐ ಮಾಡುತ್ತಿರುವ ಕೆಲವು ಉಪಕ್ರಮಗಳಾಗಿವೆ. ಪುರಭವನ ಕಾರ್ಯಕ್ರಮಗಳು, ರಾಜ್ಯ ಸರ್ಕಾರಗಳು ಸಂಘಟಿಸಿದ ವಾಣಿಜ್ಯ, ಪ್ರದರ್ಶನದಲ್ಲಿ ಪಾಲ್ಗೊಳ್ಳುವುದು, ವಿಶ್ವಾಸಾರ್ಹತೆಯಿಲ್ಲದ ಹಣಕಾಸು ಸಂಸ್ಥೆಗಳಿಂದ ಜಾಹೀರಾತು ಸ್ವೀಕರಿಸದಂತೆ ಇಂಗ್ಲಿಷ್ ಮತ್ತು ಭಾರತೀಯ ಭಾಷಾ ಪತ್ರಿಕೆಗಳಿಗೆ ಮನವಿ ಮಾಡಿಕೊಳ್ಳುವುದು ಕೂಡ ಉಪಕ್ರಮದಲ್ಲಿ ಸೇರಿದೆ.

## 37. ಹಣಕಾಸು ಸಂಸ್ಥೆಗಳಲ್ಲಿ ಹಣ ಹೂಡುವ ಗ್ರಾಹಕರ ಹಿತಾಸಕ್ತಿಯನ್ನು ರಾಜ್ಯ ಸರ್ಕಾರಗಳು ಶಾಸನ ರೂಪಿಸುವ ಉದ್ದೇಶವೇನು?

ಈ ಕಾಯಿದೆ ಮಾಡಿರುವ ಮುಖ್ಯ ಉದ್ದೇಶವು ಗ್ರಾಹಕರ ಹಿತರಕ್ಷಣೆಯೇ ಆಗಿದೆ. ಆರ್‌ಬಿಐನ ಈ ಕಾಯಿದೆಯು ಭವಿಷ್ಯದಲ್ಲಿ ಹಣಕಾಸು ಸಂಸ್ಥೆಗಳು ಶಕ್ತ ನೆಲೆಗಟ್ಟಿನ ಮೇಲೆ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಲು ಅನುವು ಮಾಡಿಕೊಡುತ್ತದೆ. ಆರ್‌ಬಿಐ ನಾಗರಿಕ ಪ್ರಾಧಿಕಾರವಾಗಿದ್ದು ಆರ್‌ಬಿಐ ಕಾಯಿದೆ

ನಾಗರಿಕ ಕಾಯಿದೆಯಾಗಿದೆ. ಎರಡೂ ಪ್ರಾಧಿಕಾರಗಳಿಗೆ ನಷ್ಟ ಅನುಭವಿಸುವ ಸಂಸ್ಥೆಗಳ ಸ್ವತ್ತು ವಶಪಡಿಸಿಕೊಳ್ಳುವ ಮತ್ತು ಮಾರಾಟ ಮಾಡುವ, ಅಧಿಕಾರಿಗಳಿಗೆ ವಿಚಾರಣೆ ನಡೆಸುವ ದತ್ತ ಅಧಿಕಾರವಿಲ್ಲ. ರಾಜ್ಯ ಸರ್ಕಾರಗಳು ಕೆಲಸವನ್ನು ಸಮರ್ಥವಾಗಿ ನಿರ್ವಹಿಸಬಲ್ಲವು. ಹಣಕಾಸು ಸಂಸ್ಥೆಗಳ ಕಾಯಿದೆಗಳು ಗ್ರಾಹಕರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ನಷ್ಟದಲ್ಲಿರುವ ಹಣಕಾಸು ಸಂಸ್ಥೆಗಳ, ಅಧಿಕಾರಿಗಳ ಸ್ವತ್ತು ವಶೀಕರಣ, ಮಾರಾಟದ ಅಧಿಕಾರವನ್ನು ರಾಜ್ಯಸರ್ಕಾರಗಳಿಗೆ ಪಾಲಿಸುತ್ತವೆ.

## 38. ಠೇವಣಿದಾರರ ಹಿತಾಸಕ್ತಿ ಕಾಪಾಡುವ ಕಾಯಿದೆಯ ಮೂಲಕ ರಾಜ್ಯಸರ್ಕಾರಗಳು ಅನಿಗಮಿತ ಮತ್ತು ಅನಧಿಕೃತ ಸಂಸ್ಥೆಗಳು ಗ್ರಾಹಕರಿಂದ ಸಂಗ್ರಹಿಸುವ ಠೇವಣಿಗಳಿಗೆ ಕಡಿವಾಣ ಹಾಕಬಹುದೆ?

ಹೌದು. ಈ ಹೇಳಿಕೆ ಬಹುಪಾಲು ಸತ್ಯವಾಗಿದೆ. ಈ ಬಗೆಯ ಅನಧಿಕೃತ, ಅಸಂಯೋಜಿತ ಸಂಸ್ಥೆಗಳು ಸಾರ್ವಜನಿಕರಿಂದ ಅನಧಿಕೃತವಾಗಿ ಠೇವಣಿಗಳನ್ನು ಸಂಗ್ರಹಿಸುವುದು ಶಿಕ್ಷಾರ್ಹ ಅಪರಾಧವಾಗಿದೆ. ಕಾಯಿದೆ ನೀಡುವ ಅಧಿಕಾರದಡಿ ರಾಜ್ಯಸರ್ಕಾರಗಳು ಈ ಬಗೆಯ ಸಂಸ್ಥೆಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಮತ್ತು ತಕ್ಷಣವೇ ಜಾರಿ ಬರುವಂತಹ ಕ್ರಮಗಳನ್ನು ಜರುಗಿಸಬಹುದು. ವಿಶೇಷ ನ್ಯಾಯಾಲಯಗಳ ಮೂಲಕ ಇಂಥ ಸಂಸ್ಥೆಗಳ ಆಸ್ತಿಯನ್ನು ಜಪ್ತಿ ಮಾಡಿ ಠೇವಣಿದಾರರಿಗೆ ಮರಳಿಸುವ ಅಧಿಕಾರವನ್ನೂ ರಾಜ್ಯಸರ್ಕಾರಗಳು ಪಡೆದಿವೆ. ಈ ಬಗೆಯ ಖದೀಮರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲು ರಾಜ್ಯಸರ್ಕಾರ/ಪೊಲೀಸರು ಸಮರ್ಥವಾಗಿವೆ. ಈ ಕಾರಣದಿಂದಾಗಿಯೇ, ಎಲ್ಲ ರಾಜ್ಯಗಳೂ ಠೇವಣಿದಾರರ ಹಿತಾಸಕ್ತಿ ಕಾಪಾಡುವ ಶಾಸನಗಳನ್ನು ರಚಿಸಲು ಆರ್‌ಬಿಐ ಆಗ್ರಹಿಸುತ್ತಲೇ ಬಂದಿದೆ. ಈವರೆಗೆ, 16 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಈ ಶಾಸನಗಳನ್ನು ರಚಿಸಲಾಗಿದೆ. ಆಂಧ್ರ ಪ್ರದೇಶ, ಅಸ್ಸೋಂ, ಬಿಹಾರ, ಗೋವ, ಗುಜರಾತ್, ಹಿಮಾಚಲಪ್ರದೇಶ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಮಿಜೋರಾಂ, ನವದೆಹಲಿ, ತಮಿಳುನಾಡು, ತ್ರಿಪುರ, ಉತ್ತರಾಖಂಡ, ಸಿಕ್ಕಿಂ, ಮೇಘಾಲಯ, ಜಮ್ಮು ಮತ್ತು ಕಾಶ್ಮೀರ ಹಾಗೂ ಚಂಡೀಗಡ ಈ ರಾಜ್ಯಗಳಾಗಿವೆ. ಗ್ರಾಹಕರ ಹಿತರಕ್ಷಣೆ ಮಾಡಲು ಕೆಲವು ರಾಜ್ಯಗಳು ಈ ಶಾಸನವನ್ನು ಸಮರ್ಥವಾಗಿ ಬಳಸಿಕೊಂಡಿವೆ.

## 39. ಸಾರ್ವಜನಿಕ ದೂರು ದುಮ್ಮಾನಗಳನ್ನು ಇತ್ಯರ್ಥಗೊಳಿಸಲು ಆರ್‌ಬಿಐ ಯಾವುದಾದರೂ ವ್ಯವಸ್ಥೆಯನ್ನು ಹೊಂದಿದೆಯೇ?

ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ವಿರುದ್ಧ ಹತ್ತಿರದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಶಾಖೆಗೆ ಯಾವುದೇ ಬಗೆಯ ದೂರು ದುಮ್ಮಾನಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಅಂಥ ಹಣಕಾಸು ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸಿ ತಕರಾರುಗಳನ್ನು ಬಗೆಹರಿಸಲಾಗುತ್ತದೆ.

## 40. ಅದೇನೇ ಇದ್ದರೂ, ನಿಯಮ ಬಾಹಿರವಾಗಿ ಸಾರ್ವಜನಿಕರನ್ನು ಮೋಸ ಮಾಡುವ ಹಣಕಾಸು ಸಂಸ್ಥೆಗಳನ್ನು ನೋಡುತ್ತಲೇ ಇರುತ್ತೇವೆ. ಈ ಬಗೆಯ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು

**ಅನಧಿಕೃತವಾಗಿ ಠೇವಣಿ ಸಂಗ್ರಹಿಸುವುದನ್ನು ತಡೆಯಲು ಆರ್‌ಬಿಐ ಯಾವ ಬಗೆಯ ಕಣ್ಗಾವಲು ವಿಧಾನವನ್ನು ಹೊಂದಿದೆ?**

ರಿಸರ್ವ್ ಬ್ಯಾಂಕ್ ತನ್ನ ಪ್ರಾದೇಶಿಕ ಕಚೇರಿಗಳಲ್ಲಿನ ಮಾರುಕಟ್ಟೆ ಕಣ್ಗಾವಲು ವ್ಯವಸ್ಥೆಯನ್ನು ಸಂವರ್ಧಿಸುತ್ತಿದೆ. ಮತ್ತು ಮಾರುಕಟ್ಟೆ ವರದಿಯನ್ನು ಆಧರಿಸಿ ಅಥವ ಆರ್‌ಬಿಐ ಸ್ವೀಕರಿಸಿದ ದೂರುಗಳಿಗೆ ಆಧರಿಸಿ ನಿರಂತರವಾಗಿ ಇಂಥ ಸಂಸ್ಥೆಗಳ ಮೇಲೆ ನಿಗಾ ವಹಿಸಿರುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಬಹುದೊಡ್ಡ ಪಾತ್ರವನ್ನು ವಹಿಸಬಲ್ಲರು. ಇಂಥ ಸಂಸ್ಥೆಗಳ ಅನುಮಾನಾಸ್ಪದ ವ್ಯವಹಾರ ಕಂಡುಬಂದರೆ ಆರ್‌ಬಿಐ ನಿಯಮಾನುಸಾರ ಆ ಕೂಡಲೇ ದೂರನ್ನು ಸಲ್ಲಿಸಬೇಕು. ಉದಾಹರಣೆಗೆ, ಇಂಥ ಸಂಸ್ಥೆಗಳು ಆರ್‌ಬಿಐನಿಂದ ಠೇವಣಿ ಸಂಗ್ರಹಿಸಲು ಅಧಿಕೃತ ಪರವಾನಗಿ ಪತ್ರ ಪಡೆಯದೇ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಂತೆ ಠೇವಣಿ ಸಂಗ್ರಹಿಸುತ್ತಿದ್ದರೆ ಕೂಡಲೇ ದೂರು ನೀಡುವುದಾಗಿದೆ. ಸಾರ್ವಜನಿಕರು ತಮ್ಮ ವಿವೇಚನೆಯನ್ನು ಬಳಸಿ ಹಣ ಹೂಡಿಕೆ ಮಾಡಿದರೆ, ಇಂಥ ನಾಯಿಕೊಡೆ ಸಂಸ್ಥೆಗಳು ಕಾರ್ಯನಿರ್ವಹಿಸಲು ಸಾಧ್ಯವಾಗಲಾರದು. ಹೂಡಿಕೆಯ ಮೇಲೆ ಅಧಿಕ ಲಾಭ ಎಂದರೆ ಅಧಿಕ ಅಪಾಯ ಕೂಡ ಎಂಬುದನ್ನು ಗ್ರಾಹಕರು ಅರಿಯಬೇಕು. ಈ ಬಗೆಯ ಊಹಾತ್ಮಕ ಹೂಡಿಕೆಯು ನಿಶ್ಚಿತ ಆದಾಯವನ್ನು ನೀಡಲಾರದು ಎಂಬುದನ್ನು ಗಮನಿಸಬೇಕು. ಹಣವನ್ನು ಹೂಡುವ ಮೊದಲು ಆ ಸಂಸ್ಥೆಯು ಅಧಿಕೃತ ನಿಯಂತ್ರಕ ಪ್ರಾಧಿಕಾರದಿಂದ ಮಾನ್ಯತಾಪತ್ರವನ್ನು ಪಡೆದಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಬೇಕು.

## ಎಚ್. ಸಮಷ್ಟಿ ಹೂಡಿಕೆ ಸ್ಕೀಮ್‌ಗಳು ಮತ್ತು ಚಿಟ್ ಫಂಡ್‌ಗಳು

### 41. ಸಮಷ್ಟಿ ಹೂಡಿಕೆ ಸ್ಕೀಮುಗಳು ಆರ್‌ಬಿಐಯ ನಿಯಂತ್ರಣಕ್ಕೆ ಒಳಪಟ್ಟಿವೆಯೇ?

ಇಲ್ಲ. ಹೂಡಿಕೆ ಹಣವನ್ನು ಘಟಕಗಳಾಗಿ ಪರಿವರ್ತಿಸಿ, ರೆಸಾರ್ಟು, ಕಾಡು ಮಾರಾಟ, ವಾಣಿಜ್ಯ ಪ್ರದೇಶಗಳ ಅಭಿವೃದ್ಧಿ ಮತ್ತು ಕಟ್ಟಡ ನಿರ್ಮಾಣದಿಂದ ಬಂದ ಲಾಭ ಇತ್ಯಾದಿಯನ್ನು ಸಮಷ್ಟಿ ಹೂಡಿಕೆ ಎಂದು ಗುರುತಿಸಲಾಗುತ್ತದೆ. ಸಮಷ್ಟಿ ಹೂಡಿಕೆಗಳು ಆರ್‌ಬಿಐ ನಿಯಂತ್ರಣದಿಂದ ಹೊರತಾಗಿವೆ.

### 42. ಹಾಗಿದ್ದರೆ, ಈ ಸಮಷ್ಟಿ ಹೂಡಿಕೆಯನ್ನು ಯಾರು ನಿಯಂತ್ರಿಸುತ್ತಾರೆ?

ಸೆಬಿ ಇಂಥ ಹೂಡಿಕೆಗಳ ನಿಯಂತ್ರಣ ಪ್ರಾಧಿಕಾರವಾಗಿದೆ. ಇಂಥ ಹೂಡಿಕೆಗಳ ಮತ್ತು ಪ್ರವರ್ತಕರ ಕುರಿತ ದೂರುದುಮ್ಮಾನವನ್ನು ಸೆಬಿ ಮತ್ತು ರಾಜ್ಯ ಸರ್ಕಾರ/ಪೊಲೀಸ್ ಇಲಾಖೆಗೆ ನೀಡಬೇಕಿದೆ.

### 43. ಚಿಟ್ ಫಂಡ್ ವ್ಯವಹಾರ ನಡೆಸುವುದು ಕಾನೂನು ಸಮ್ಮತವಾಗಿದೆಯೇ?

ಈ ಬಗೆಯ ಚೀಟಿ ವ್ಯವಹಾರಗಳು ಚಿಟ್ ಫಂಡ್ ಆಕ್ಟ್ 1982ರ ಅಡಿಯಲ್ಲಿ ನಡೆಯುತ್ತವೆ. ಇದು ಕೇಂದ್ರದ ಕಾನೂನಾಗಿದ್ದು ರಾಜ್ಯಸರ್ಕಾರಗಳು ಈ ಕಾನೂನನ್ನು ನಿರ್ವಹಿಸುತ್ತದೆ. ಚೀಟಿ ವ್ಯವಹಾರಗಳು ಈ ಕಾಯಿದೆಯಡಿಯಲ್ಲಿ ನೋಂದಾಯಿತವಾಗಿದ್ದರೆ ವ್ಯವಹಾರ ನಡೆಸಲು ಅರ್ಹವಾಗಿರುತ್ತವೆ.

### 44. ಚಿಟ್ ಫಂಡ್ ಸಂಸ್ಥೆಗಳು ಹಣಕಾಸು ಸಂಸ್ಥೆಗಳಾಗಿದ್ದರೆ ಅವನ್ನು ಆರ್‌ಬಿಐ ಏಕೆ

**ನಿಯಂತ್ರಿಸುವುದಿಲ್ಲ?**

ಚಿಟ್‌ಫಂಡ್ ಸಂಸ್ಥೆಗಳು ಕೇಂದ್ರ ಸರ್ಕಾರದ ಚಿಟ್‌ಫಂಡ್ ಆಕ್ಟ್,1982ರಡಿ ಕಾರ್ಯ ನಿರ್ವಹಿಸುತ್ತವೆ. ಮತ್ತು ಈ ಕಾಯಿದೆಯನ್ನು ರಾಜ್ಯ ಸರ್ಕಾರವು ನಿಯಂತ್ರಿಸುತ್ತದೆ. ಆರ್‌ಬಿಐ 2009 ರಿಂದ ಸಾರ್ವಜನಿಕರಿಂದ ಚಿಟ್ ಸಂಸ್ಥೆಗಳು ಠೇವಣಿ ಸ್ವೀಕರಿಸುವುದನ್ನು ನಿರ್ಬಂಧಿಸಿದೆ. ಅದನ್ನೂ ಮೀರಿ ಚಿಟ್ ಸಂಸ್ಥೆಗಳು ಠೇವಣಿ ಸ್ವೀಕರಿಸುತ್ತಿದ್ದರೆ ಆರ್‌ಬಿಐ ಅಂಥ ಸಂದರ್ಭದಲ್ಲಿ ದಂಡಿಸಬಹುದಾಗಿದೆ.

## ಐ. ಹಣ ಚಲಾವಣೆ (ಮನಿ ಸರ್ಕ್ಯುಲೇಶನ್) /ಬಹುನೆಲೆ ಮಾರುಕಟ್ಟೆ (ಎಂಎಲ್‌ಎಂ) /ಪೋಂಜಿ ಸ್ಕೀಮು/ ಸಂಯೋಜಿತವಲ್ಲದ ಸಂಸ್ಥೆಗಳು (ಯೂಐಬಿ)

### 45. ಹಣ ಚಲಾವಣೆ/ಪೋಂಜಿ/ಬಹುನೆಲೆಯ ಮಾರುಕಟ್ಟೆ ಸ್ಕೀಮುಗಳು, ಹಾಗೆಂದರೇನು?

ಹಣ ಚಲಾಚಣೆ, ಬಹುನೆಲೆಯ ಮಾರುಕಟ್ಟೆ/ಸರಪಣಿ ಮಾರುಕಟ್ಟೆ ಅಥವ ಪೋಂಜಿ ಸ್ಕೀಮುಗಳು ಎಂದರೆ– ನೋಂದಾವಣೆಗೊಂಡ ಸದಸ್ಯರಿಗೆ ತ್ವರಿತಗತಿಯ, ಸುಲಭ ಮಾರ್ಗದ ಹಣದ ಆಮಿಷವನ್ನು ಒಡ್ಡುವುದು. ಈ ಬಗೆಯ ಬಹುನೆಲೆಯ ಮಾರುಕಟ್ಟೆ ಸ್ಕೀಮುಗಳಲ್ಲಿ ಆದಾಯವು ಉತ್ಪನ್ನಗಳ ಮಾರಾಟದಿಂದ ಬರುವುದಿಲ್ಲ. ಬದಲಿಗೆ, ಸ್ಕೀಮಿಗೆ ತರುವ ಸದಸ್ಯರ ಸಂಖ್ಯೆಯ ಮೇಲೆ ಅವಲಂಬಿತವಾಗಿರುತ್ತದೆ. ಪಿರಮಿಡ್ ಮಾದರಿಯ ಈ ಸ್ಕೀಮುಗಳು ಮೇಲೆ ಮೇಲೆ ಹೋದ ಸದಸ್ಯರಿಗೆ ಹಣವನ್ನು ನೀಡುತ್ತವೆ. ಸದಸ್ಯತ್ವದ ಶುಲ್ಕ ಭಾರೀ ಮೊತ್ತದ್ದಾಗಿರುತ್ತವೆ. ಹೀಗಾಗಿ, ಪ್ರತಿ ಸದಸ್ಯರೂ ಹೆಚ್ಚು ಹೆಚ್ಚು ಸದಸ್ಯರನ್ನು ನೋಂದಾಯಿಸಬೇಕಾಗುತ್ತದೆ. ಸಂಗ್ರಹಿಸಿದ ಸದಸ್ಯತ್ವ ಶುಲ್ಕದ ಪಾಲನ್ನು ಮೇಲಮೇಲಕ್ಕೇರುತ್ತಿರುವ ಸದಸ್ಯರಿಗೆ ಹಂಚಿಕೆಯಾಗುತ್ತದೆ. ಈ ಸರಣಿಯಲ್ಲಿ ವ್ಯತ್ಯಾಸವಾದರೆ, ಸ್ಕೀಮು ಮುರಿದು ಬೀಳುತ್ತದೆ. ಅಂಥ ಸಂದರ್ಭಗಳಲ್ಲಿ ಪಿರಮಿಡ್‌ನ ಕೆಳಗಿನ ಹಂತದಲ್ಲಿರುವ ಸದಸ್ಯರಿಗೆ ನಷ್ಟವಾಗುತ್ತದೆ. ಅಧಿಕ ಹಣ ಮರುಪಾವತಿಯ ಆಶ್ವಾಸನೆಯ ಮೇಲೆ ಸಾರ್ವಜನಿಕ ಹಣ ಸಂಗ್ರಹಣೆ ಮಾಡುವುದನ್ನು ಪೋಂಜಿ ಸ್ಕೀಮುಗಳು ಎಂದು ಕರೆಯುತ್ತಾರೆ. ಈ ಪ್ರಕ್ರಿಯೆಯಲ್ಲಿ ಸ್ವತ್ತುಗಳು ನಿರ್ಮಾಣವಾಗುವುದಿಲ್ಲ. ಬದಲಿಗೆ, ಒಬ್ಬ ಸದಸ್ಯನಿಂದ ಪಡೆದ ಹಣವನ್ನು ಇನ್ನೊಬ್ಬ ಸದಸ್ಯನಿಗೆ ನೀಡಲಾಗುತ್ತದೆ. ಈ ಕಾರಣದಿಂದಾಗಿಯೇ, ಆದಾಯವನ್ನು ಖಾತರಿಪಡಿಸುವ ಯಾವ ಚಟುವಟಿಕೆಗಳೂ ನಡೆಯುವುದಿಲ್ಲ. ಹಾಗಾಗಿ, ಆಶ್ವಾಸನೆ ನೀಡಿದ ಅಧಿಕ ಮೊತ್ತದ ಮರುಪಾವತಿ, ಅನೇಕ ಸನ್ನಿವೇಶದಲ್ಲಿ ಮೂಲಧನ ವಾಪಸಾತಿ ಕೂಡ ಸಾಧ್ಯವಾಗುವುದಿಲ್ಲ ಮತ್ತು ಇಡೀ ಸ್ಕೀಮು ಜೀವಿಸಬಲ್ಲ ಸಾಮರ್ಥ್ಯ ಹೊಂದಿರುವುದಿಲ್ಲ. ಇಡೀ ಸ್ಕೀಮು ವೈಫಲ್ಯವಾಗುವುದರಿಂದ ಹಣ ಎತ್ತಿದವರು ಪರಾರಿಯಾಗುತ್ತಾರೆ.

### 46. ಹಣ ಚಲಾಚಣೆ/ಬಹುನೆಲೆಯ ಮಾರುಕಟ್ಟೆ/ಪಿರಮಿಡ್ ಮಾದರಿ ಸ್ಕೀಮುಗಳಡಿ ಹಣವನ್ನು ಸಂಗ್ರಹಿಸುವುದು ಮಾನ್ಯವೆ?

ಇಲ್ಲ. ಹಣ ಚಲಾಚಣೆ/ಬಹುನೆಲೆಯ ಮಾರುಕಟ್ಟೆ/ಪಿರಮಿಡ್ ಮಾದರಿ ಸ್ಕೀಮುಗಳಡಿ ಹಣವನ್ನು ಸಂಗ್ರಹಿಸುವುದು

ಮಾನ್ಯತೆಯನ್ನು ಪಡೆದಿರುವುದಿಲ್ಲ. ಮಾತ್ರವಲ್ಲ, ಈ ಬಗೆಯ ಸ್ಕೀಮುಗಳು ಪ್ರೈಜ್ ಚಿಟ್ ಆಂಡ್ ಮನಿ ಸರ್ಕ್ಯುಲೇಶನ್ (ಬ್ಯಾನಿಂಗ್) ಕಾಯಿದೆ 1975ರಡಿ ಶಿಕ್ಷಾರ್ಹ ಅಪರಾಧವಾಗಿವೆ.

**47. ಈ ಬಗೆಯ ಸ್ಕೀಮುಗಳನ್ನು ಆರ್‌ಬಿಐ ನಿಯಂತ್ರಿಸುತ್ತದೆಯೇ? ಈ ಬಗೆಯ ಸ್ಕೀಮುಗಳು** ಪ್ರೈಜ್ ಚಿಟ್ ಆಂಡ್ ಮನಿ ಸರ್ಕ್ಯುಲೇಶನ್ (ಬ್ಯಾನಿಂಗ್) ಕಾಯಿದೆ 1975ರಡಿ ಶಿಕ್ಷಾರ್ಹ ಅಪರಾಧವಾಗಿವೆ. ಈ ಕಾನೂನಿಗೆ ಸಂಬಂಧಿಸಿದಂತೆ ಕೇಂದ್ರಸರ್ಕಾರಕ್ಕೆ ಸಲಹೆ ಮತ್ತು ಸಹಕಾರ ನೀಡುವುದನ್ನು ಬಿಟ್ಟರೆ, ಕಾನೂನನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಆರ್‌ಬಿಐ ಪಾತ್ರವೇನೂ ಇಲ್ಲ.

### 48. ಹಾಗಿದ್ದರೆ, ಈ ಸ್ಕೀಮುಗಳನ್ನು ಯಾರು ನಿಯಂತ್ರಿಸುತ್ತಾರೆ.

ಪ್ರೈಜ್ ಚಿಟ್ ಆಂಡ್ ಮನಿ ಸರ್ಕ್ಯುಲೇಶನ್ (ಬ್ಯಾನಿಂಗ್) ಕಾಯಿದೆ 1975ರಡಿ ಹಣ ಚಲಾವಣೆ, ಬಹುನೆಲೆಯ ಮಾರುಕಟ್ಟೆ/ಪಿರಮಿಡ್ ಮಾದರಿ ಸ್ಕೀಮುಗಳು ಶಿಕ್ಷಾರ್ಹ ಅಪರಾಧವಾಗಿವೆ. ಈ ಕಾನೂನು ಯಾವುದೇ ವ್ಯಕ್ತಿ ಈ ಬಗೆಯ ಸ್ಕೀಮುಗಳನ್ನು ನಡೆಸುವುದನ್ನು, ವ್ಯಕ್ತಿಗಳು ಸದಸ್ಯರಾಗಿ ನೋಂದಾಯಿತರಾಗುವುದನ್ನು, ಸ್ಕೀಮಿನಲ್ಲಿ ಭಾಗವಹಿಸುವುದನ್ನು, ಹಣ ಸ್ವೀಕಾರ–ಮರುಪಾವತಿಯನ್ನು ನಿಷೇಧಿಸುತ್ತದೆ. ಈ ಕಾಯಿದೆಯ ಉಲ್ಲಂಘನೆಯ ವಿವರಗಳನ್ನು ರಾಜ್ಯಸರ್ಕಾರಗಳು ನಿರ್ವಹಿಸುತ್ತವೆ.

### 49. ಯಾರಾದರೂ ಇಂಥ ಸ್ಕೀಮ್ ನಡೆಸುತ್ತಿದ್ದರೆ ಏನು ಮಾಡಬೇಕು?

ಇಂಥ ಚಟುವಟಿಕೆಗೆ ಸಂಬಂಧಿಸಿದ ಯಾವುದೇ ದೂರನ್ನು ರಾಜ್ಯ ಸರ್ಕಾರದ ಪೊಲೀಸ್/ಆರ್ಥಿಕ ಅಪರಾಧ ನಿಯಂತ್ರಣ ದಳ ಅಥವ ಕೇದ್ರ ಕಾರ್ಪೋರೇಟ್ ವ್ಯವಹಾರಗಳ ಇಲಾಖೆಗೆ ನೀಡಬೇಕಿದೆ. ಒಂದೊಮ್ಮೆ ಆರ್‌ಬಿಐ ಗಮನಕ್ಕೆ ಇಂಥ ದೂರು ಬಂದಲ್ಲಿ ರಾಜ್ಯಸರ್ಕಾರಗಳಿಗೆ ರವಾನಿಸುತ್ತದೆ.

### 50. ಠೇವಣಿದಾರ/ಹೂಡಿಕೆದಾರ ದೂರು ಮುಮ್ಮಾನಗಳಿಗೆ ಯಾರನ್ನು ಸಂಪರ್ಕಿಸಬೇಕು?

ಕೆಳಗೆ ನೀಡಿದ ಎರಡು ಕೋಷ್ಟಕಗಳು ಚಟುವಟಿಕೆಗಳು, ಮತ್ತು ಅದನ್ನು ನಿಯಂತ್ರಿಸುವ, ಕಣ್ಗಾವಲು ವಹಿಸುವ ನಿಯಂತ್ರಣ ಪ್ರಾಧಿಕಾರಗಳ ಹೆಸರುಗಳನ್ನು ನೀಡಲಾಗಿದೆ. ದೂರುದುಮ್ಮಾನಗಳನ್ನು ಅವರಿಗೆ ಸಲ್ಲಿಸಬಹುದಾಗಿದೆ. ಒಂದೊಮ್ಮೆ ನಿಷೇಧಿತ ಚಟುವಟಿಕೆಗೆ ಸಂಬಂಧಿಸಿದ್ದರೆ ರಾಜ್ಯಸರ್ಕಾರ/ಆರ್ಥಿಕ ಅಪರಾಧ ನಿಯಂತ್ರಣ ದಳಕ್ಕೆ ಸೂಕ್ತ ಮಾದರಿಯಲ್ಲಿ ದೂರು ಸಲ್ಲಿಸಬಹುದಾಗಿದೆ.

### 51. ಅನಿಗಮಿತ ಸಂಸ್ಥೆಗಳು ಠೇವಣಿಗಳನ್ನು ಸ್ವೀಕರಿಸುತ್ತಿದ್ದರೆ ಅವುಗಳ ವಿರುದ್ಧ ಯಾರು ಕ್ರಮ ಕೈಗೊಳ್ಳಬಹುದಾಗಿದೆ?

ಆರ್‌ಬಿಐ ಕಾಯಿದೆ, 45 ಟಿ ನಿಯಮದ ಪ್ರಕಾರ ರಾಜ್ಯ ಸರ್ಕಾರ ಮತ್ತು ಆರ್‌ಬಿಐಗಳು ಆ ಅಧಿಕಾರವನ್ನು ಹೊಂದಿವೆ. ಆದಾಗ್ಯೂ, ತಕ್ಷಣವೇ ಕ್ರಮ ಜರುಗಿಸಬೇಕಿದ್ದರೆ, ರಾಜ್ಯ ಪೊಲೀಸ್ ವ್ಯವಸ್ಥೆ ಅಥವ ಆರ್ಥಿಕ ಅಪರಾಧ

ವಿಚಕ್ಷಣ ದಳಗಳಿಗೆ ದೂರು ನೀಡಿದರೆ ತಕ್ಷಣವೇ ಕ್ರಮಕೈಗೊಳ್ಳಲು ಅನುವು ಮಾಡಿಕೊಟ್ಟಂತಾಗುತ್ತದೆ. ರಾಜ್ಯ ಸರ್ಕಾರದ ಆಡಳಿತ ಯಂತ್ರ ವಿಶಾಲವಾಗಿರುವುದರಿಂದ ಮತ್ತು ಆರ್‌ಬಿಐ ಕಾಯಿದೆ 1934ರಡಿಯಲ್ಲಿ ರಾಜ್ಯಸರ್ಕಾರಗಳಿಗೆ ಕ್ರಮ ಕೈಗೊಳ್ಳುವ ಅಧಿಕಾರ ಪ್ರಾಪ್ತವಿರುವುದರಿಂದ ಆ ಬಗೆಯ ಯಾವುದೇ ಮಾಹಿತಿ, ದೂರುಗಳನ್ನು ರಾಜ್ಯ ಸರ್ಕಾರದ ಪೊಲೀಸ್ ವ್ಯವಸ್ಥೆ, ಆರ್ಥಿಕ ಅಪರಾಧ ವಿಚಕ್ಷಣ ದಳಗಳಿಗೆ ನೀಡಬೇಕಿದೆ.

ಅನೇಕ ರಾಜ್ಯಗಳು ಗ್ರಾಹಕರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುವ ಕಾನೂನುಗಳನ್ನು ರಚಿಸಿವೆ. ಈ ಕಾನೂನುಗಳು ರಾಜ್ಯಸರ್ಕಾರಗಳು ಸರಿಯಾದ ಸಮಯದಲ್ಲಿ ಕ್ರಮ ಕೈಗೊಳ್ಳಲು ಅವಕಾಶ ಮಾಡಿಕೊಡುತ್ತವೆ.

ಅನಿಗಮಿತ ಸಂಸ್ಥೆಗಳ ರೂಪದಲ್ಲಿ ವ್ಯಕ್ತಿಗಳು, ಸಂಸ್ಥೆಗಳು, ಅಂಸಯೋಜಿತ ಸಂಘಗಳು ವ್ಯಕ್ತಿಗಳಿಂದ, ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುವುದು ಆರ್‌ಬಿಐ ಕಾಯಿದೆ 1934ರ 45 ಎಸ್ ನಿಯಮದಡಿ ವಿಶೇಷವಾಗಿ ನಿಷೇಧಿಸಲಾಗಿದೆ. ಈ ಸಂಸ್ಥೆಗಳು ಠೇವಣಿ ಸಂಗ್ರಹವನ್ನು ತಮ್ಮ ಆದ್ಯತೆಯ ವಹಿವಾಟಾಗಿ ನಡೆಸುವುದು ನಿಷೇಧಿತವಾಗಿದೆ. ಮಾತ್ರವಲ್ಲ, ಠೇವಣಿ ಸಂಗ್ರಹಿಸುವ ಇಂಥ ಅಸಂಯೋಜಿತ ಸಂಸ್ಥೆಗಳಿಗೆ ಸೆರೆವಾಸ ಮತ್ತು ದಂಡನೆ ಅಥವ ಎರಡೂ ನೀಡಬಲ್ಲ ಅಧಿಕಾರವನ್ನು ಕಾನೂನು ಒದಗಿಸಿಕೊಡುತ್ತದೆ.

ಒಂದೊಮ್ಮೆ ಅಸಂಯೋಜಿತ ಸಂಸ್ಥೆಗಳು ಠೇವಣಿ ಸಂಗ್ರಹಿಸುವುದು ಗಮನಕ್ಕೆ ಬಂದರೆ, ಆರ್‌ಬಿಐ ಮತ್ತು ರಾಜ್ಯಸರ್ಕಾರಗಳು ಸಹವರ್ತಿಯಾಗಿ ಅಂಥ ಸಂಸ್ಥೆಗಳ ವಿರುದ್ಧ ನ್ಯಾಯಾಲಯಗಳಿಂದ ಶೋಧನಾ ಪತ್ರವನ್ನು ಪಡೆಯುವ ಅಧಿಕಾರವನ್ನು ಆರ್‌ಬಿಐ 1934ರ ಕಾಯಿದೆಯು ಪ್ರಾಪ್ತವಾಗಿಸುತ್ತದೆ. ಆರ್‌ಬಿಐ ನಿಯೋಜಿಸುವ ಅಧಿಕೃತ ಅಧಿಕಾರಿ ಅಥವ ರಾಜ್ಯಸರ್ಕಾರಗಳು ಅಂಥ ಅಂಸಯೋಜಿತ ಸಂಸ್ಥೆ, ವ್ಯಕ್ತಿ ವಿರುದ್ಧ ನ್ಯಾಯಾಲಯದಲ್ಲಿ ಸಂಬಂಧಿತ ಅಪರಾಧಕ್ಕಾಗಿ ದೂರು ಸಲ್ಲಿಸಬಹುದಾಗಿದೆ.

**ಅನುಬಂಧ–1**

## *CHART - I*

### Overview of Regulators of Non-Banking Companies

**Companies**
**(Registered under Section 3 of the Companies Act 1956)**

**NBFCs registered with RBI ***

Regulation, Supervision, Surveillance & Enforcement under RBI

**NBFCs Regulated by Other Regulators**

| **Type of Financial Institutions** | **Authority for Regulation, Supervision, Surveillance & Enforcement** |
|---|---|
| Housing Finance Institutions | National Housing Bank |
| Merchant Banking Company, Venture Capital Fund Companies, Stock Broking, Collective Investment Schemes(CIS) | SEBI |
| Nidhi Companies, Mutual Benefit Companies | MCA |
| Chit Fund Companies | State Government |
| Insurance Companies | IRDA |

**Non Banking Non Financial Companies**

Regulation, Supervision and Surveillance under the Companies Act 1956.

**Regulator** : Ministry of Corporate Affairs (MCA)

**Enforcement Agency** : State Governments

*

**ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ: ಒಂದು ಹಣಕಾಸು ಸಂಸ್ಥೆಯಾಗಿದ್ದು ಸಾಲ ನೀಡುವ ಅಥವ ಯಾವುದೇ ಸ್ಕೀಮು ಅಥವ ಯೋಜನೆಯಡಿ ಠೇವಣಿ ಸಂಗ್ರಹಿಸುತ್ತದೆ. ಆದರೆ, ಕೃಷಿ ಚಟುವಟಿಕೆ, ಕೈಗಾರಿಕಾ ಚಟುವಟಿಕೆ, ಸ್ಥಿರಾಸ್ತಿ ಖರೀದಿ, ಮಾರಾಟ ಅಥವ ವ್ಯವಹಾರವನ್ನು ನಡೆಸುವುದಿಲ್ಲ. ಹಣಕಾಸು ಠೇವಣಿಯನ್ನು ಸ್ವೀಕರಿಸುವುದನ್ನು ತನ್ನ ತಾತ್ತ್ವಿಕ ಆದ್ಯಾತಾ ವಹಿವಾಟು ಮಾಡಿಕೊಂಡಿರುವ ಸಂಸ್ಥೆ ಕೂಡ ಬ್ಯಾಂಕಿಂಗೇತರ ಹಣಕಾಸು ಎಂದು ಗುರುತಿಸಬಹುದು.**

ಅನುಬಂಧ–2

***CHART II***

**Overview of Regulators of Entities other than Companies**

